# ನಾದನೂಪುರ ವಂಡಾರು
# Nadanoopura Vandaru



ಮಗುವಿನ ಜನ್ಮ ದಿನದ ಸಂಭ್ರಮ; ಕಲಾವಿದರಿಗೆ ಆರೋಗ್ಯ ವಿಮೆ; ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ನೇತೃತ್ವ

ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಬಪ್ಪನಾಡು ಮೇಳದಲ್ಲಿ ತೋರಲಿದೆ ಗುಳಿಗನ ಕಾರ್ಣಿಕ
ಮಗನ ಜನ್ಮದಿನ; ಕಲಾವಿದರಿಗೆ ಆರೋಗ್ಯ ವಿಮೆ
ಬಡಗಿನ ಅರ್ಥಗಾರಿಕೆಗೆ ಮೆರುಗು ತಂದ ಕಲಾವಿದ – ಆರ್ಗೋಡು
ಯಕ್ಷ ಸಂಗಮದ ಆಯೋಜನೆಯಲ್ಲಿ ಪೂರ್ಣ ರಾತ್ರಿ ತಾಳಮದ್ದಳೆ
ಅಂಗತ್ವ ಅಲ್ಪ ಸಂಖ್ಯಾತರಿಗೆ ಯಕ್ಷಗಾನ ತರಬೇತಿ
ಧೀರ ಕಲೆಯೊಳಗೆ ಕೀರವಾಣಿಯರು – 15– ಮಯೂರಿ ಉಪಾಧ್ಯಾಯ
ಅನನ್ಯ ಸಾಹಿತ್ಯ ಸೇವೆಯ ಪ್ರಸಂಗಕರ್ತ ಕಡಂದಲೆ ರಾಮರಾಯ
ಪ್ರಸಂಗ ವ್ಯಾಖ್ಯಾನ, ಲಕ್ಷಣಗಳ ವಿವೇಚನೆ

## ತಿಂಗಳ ಹೈಲೈಟ್ಸ್

ಮಗನ ಜನ್ಮದಿನ; ಕಲಾವಿದರಿಗೆ ಆರೋಗ್ಯ ವಿಮೆ
ಬಡಗಿನ ಅರ್ಥಗಾರಿಕೆಗೆ ಮೆರುಗು ತಂದ ಕಲಾವಿದ – ಆರ್ಗೋಡು
ಖಳ ಪಾತ್ರಗಳಿಗೆ ಕಳೆ ಇವರು ಮಯೂರಿ
ಅನನ್ಯ ಸಾಹಿತ್ಯ ಸೇವೆಯ ಪ್ರಸಂಗಕರ್ತ ಕಡಂದಲೆ ರಾಮರಾಯ
ಯಕ್ಷ ಸಂಗಮದ ಆಯೋಜನೆಯಲ್ಲಿ ಪೂರ್ಣ ರಾತ್ರಿ ತಾಳಮದ್ದಳೆ
ಬಪ್ಪನಾಡು ಮೇಳದಲ್ಲಿ ತೋರಲಿದೆ ಗುಳಿಗನ ಕಾರ್ಣಿಕ

## ಬೋರ್ಡ್ ರೂಂ



ಗೋವಿಂದ ವಂಡಾರು

**ಆತ್ಮೀಯರೆ,**

ಯಾವುದೇ ಕ್ಷೇತ್ರವಿರಲಿ ಅಲ್ಲಿ ದುಡಿಯುವ ವರ್ಗದವರಿಗಾಗಿ ಒಂದು ಸಂಘಟನೆಯಿರುತ್ತದೆ. ಹಾಗೆಯೇ ಯಕ್ಷಗಾನ ಕಲಾವಿದರ ನೆರವಿಗೆ ಬರುವಂತಹಾ ಕಲಾರಂಗ, ಅಕಾಡೆಮಿ, ಮತ್ತಿತರ ಖಾಸಗಿ ಸಂಸ್ಥೆಗಳು ಕಲಾವಿದರ ಸಂಕಷ್ಟದಲ್ಲಿ ನೆರವಾಗುತ್ತವೆ. ಕಲಾವಿದರಿಗೆ ಅಭಿಮಾನಿ ವರ್ಗವೂ ಇದೆ. ಆದರೆ ಚೌಕಿ ಕಟ್ಟುವ, ವೇಷಕ್ಕೆ ಸಹಾಯ ಮಾಡುವ ರಂಗ ಸಹಾಯಕ ಕಾರ್ಮಿಕರಿಗೆ ಒಂದು ಸಂಘಟಿತ ನೆರವಿನ ಘಟಕವಿಲ್ಲ. ಈ ರಂಗದ ಹಿಂದಿನ ಶ್ರಮಿಕ ವರ್ಗವನ್ನು ಯಾರೂ ಗುರುತಿಸುವುದೂ ಇಲ್ಲ. ಇಂತಹ ಸಂದರ್ಭದಲ್ಲಿ ಅವರ ಕಷ್ಟಕ್ಕೆ ಸ್ಪಂದಿಸುವ ಒಂದು ವ್ಯವಸ್ಥೆಯ ಅಗತ್ಯವಿದೆ. ನಾದನೂಪುರ ಟ್ರಸ್ಟ್ ಈ ಬಗ್ಗೆ ಚಿಂತನೆ ನಡೆಸಿದ್ದರೂ ದೊಡ್ಡ ಮಟ್ಟದ ಯೋಜನೆಗಳಿಗೆ ಕೈ ಹಾಕುವ ಸಾಮರ್ಥ್ಯ ಇನ್ನೂ ಪಡೆದುಕೊಳ್ಳಬೇಕಿದೆ. ಈ ಹೊತ್ತಲ್ಲಿ ಟ್ರಸ್ಟ್ ನ ಆಶಯಗಳನ್ನು ಗುರುತಿಸಿದ ಅಪ್ಪಟ ಯಕ್ಷಪ್ರೇಮಿಗಳಾಗಿರುವ ಸುಧೀರ್ ಅಮೀನ್ ಕೊಕ್ಕರ್ಣೆಯವರು ಟ್ರಸ್ಟ್ ಮುಖಾಂತರ ಉತ್ತಮ ಕಾರ್ಯ ನಡೆಸಿದ್ದಾರೆ. ಯಕ್ಷಗಾನದ ಕಲಾವಿದರನ್ನೂ ಸೇರಿಸಿ ಅಸಂಘಟಿತ ಕಾರ್ಮಿಕರಿಗೆ ಒಂದು ವರ್ಷದ ಆಪತ್ಕಾಲದಲ್ಲಿ ನೆರವಾಗಬಲ್ಲ ಆರೋಗ್ಯ ವಿಮೆ ಮಾಡಿಸಿಕೊಟ್ಟಿದ್ದಾರೆ. ಟ್ರಸ್ಟ್ ಈ ಯೋಜನೆಗೆ 15 ಜನ ಫಲಾನುಭವಿಗಳನ್ನು ಗುರುತಿಸಿ ಕಳೆದ ತಿಂಗಳಿನಲ್ಲಿ ವಿಮೆಯ ಬಾಂಡ್ ವಿತರಿಸುವ ಚಿಕ್ಕ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸುಧೀರ್ ರವರು ಯಕ್ಷಗಾನ ಕಲೆಯ ಮೇಲೆ ಅಪಾರ ಗೌರವವನ್ನು ಇಟ್ಟುಕೊಂಡಿದ್ದು ಸಾಲಿಗ್ರಾಮ ಮೇಳದ **ಚಂದ್ರಮುಖಿ ಸೂರ್ಯಸಖಿ** ಎಂಬ ಪ್ರಸಂಗವನ್ನು 50 ಬಾರಿ ನೋಡಿದ್ದಾರೆ ಎನ್ನುವುದು ವಿಶೇಷ. ಕಲೆ ಕಲಾವಿದರನ್ನು ನಿರಂತರ ಪ್ರೋತ್ಸಾಹಿಸುವ ಇವರು ತಮ್ಮ ಮಗ ತಾನ್ವಿಷ್ ನ ಜನ್ಮ ದಿನದಂದು ಟ್ರಸ್ಟ್ ಮುಖಾಂತರ ಈ ಒಂದು ಸೇವೆಗೆ ಮುಂದಾಗಿರುವುದು ನಿಜಕ್ಕೂ ಶ್ಲಾಘನೀಯ. ಅವರ ಪುಟ್ಟ ಮಗನಿಗೆ ಹುಟ್ಟು ಹಬ್ಬದ ಶುಭಾಶಯಗಳು. ಕಲೆಯ ಮೂಲ ಉದ್ದೇಶವೂ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವುದು. ಇಂತಹ ಮಾನವೀಯ ಆಶಯಗಳನ್ನು ಎತ್ತಿ ಹಿಡಿಯುತ್ತಾ ನಾದನೂಪುರ ಟ್ರಸ್ಟ್ ಮುಂದೆ ಹೆಜ್ಜೆ ಇಡಲಿದೆ. ನಮಸ್ಕಾರ. – ***ಗೋವಿಂದ ವಂಡಾರು***

*ಕಿರು ಸುದ್ದಿ – ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಕೇರಳದ ಪ್ರಸಿದ್ಧ ಪುಣ್ಯಕ್ಷೇತ್ರ ಶಬರಿಮಲೆಯ ಅಯ್ಯಪ್ಪ ಸ್ವಾಮಿಯ ಸನ್ನಿಧಿಯಲ್ಲಿ ಬಪ್ಪನಾಡು ಮೇಳದ ಯಕ್ಷಗಾನ ಕಲಾವಿದ ದಿನೇಶ್ ಕೊಡಪದವು ಅವರ ಸಂಯೋಜನೆಯಲ್ಲಿ ಕ್ಷೇತ್ರಪಾಲ ಉದ್ಧರಣ ಎಂಬ ತುಳು ಯಕ್ಷಗಾನ ಜುಲೈ ತಿಂಗಳಲ್ಲಿ ನಡೆದಿದೆ. ಪ್ರದರ್ಶನದಲ್ಲಿ ಧೀರಜ್ ರೈ ಸಂಪಾಜೆ, ರೋಹಿತ್ ಉಚ್ಚಿಲ, ಜಿತೇಶ್ ಕೋಳಿಯೂರು ಕ್ಷೇತ್ರಪಾಲನಾಗಿ ದಿನೇಶ್ ಕೊಡಪದವು ದುರ್ಗೆಯಾಗಿ ಕಾರ್ತಿಕ ಗಂಜಿಮಠ ಸುಮಾರು ಮುಕ್ಕಾಲು ಗಂಟೆಗಳ ಕಾಲ ಪ್ರದರ್ಶನ ನೀಡಿದ್ದರು.*

ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು

**ಸಂಪಾದಕೀಯ**

***ಆತ್ಮೀಯ ಓದುಗರೆ,***

**ಇ**ತ್ತೀಚಿಗೆ ಜಾಲತಾಣಗಳಲ್ಲಿ ಚಿಕ್ಕ ಮೇಳ ಎಂಬ ಕಲೆ(ಯಕ್ಷಗಾನದ ಕಿರು ಪ್ರಕಾರ) ಯನ್ನು ನಿಕೃಷ್ಟ ಮಟ್ಟದಲ್ಲಿ ಪ್ರದರ್ಶನ ನೀಡುತ್ತಿದ್ದ ಕೆಲ ತಂಡದ ವೀಡಿಯೋ ತುಣುಕುಗಳು ವ್ಯಾಪ ಟೀಕೆಗೆ ಒಳಗಾಗಿತ್ತು. ಒಂದು ಪ್ರದರ್ಶನದಲ್ಲಿ, 'ರಾಜಶೀವಿಯಿಂದ ಪೋಪುದೆಲ್ಲಿ ಪ್ರಾಣ ಕಾಂತಾ' ಎಂಬ ಸ್ತ್ರೀ ವೇಷದವನ ಹಾಡಿಗೆ ಪುಂಡು ವೇಷ ಧರಿಸಿದ್ದವ ಕೋಡಂಗಿಯಂತೆ ಬೇಕಾಬಿಟ್ಟಿ ನೆಗೆದಾಡುತ್ತಿದ್ದರೆ, ಇನ್ನೊಂದು ಪ್ರದರ್ಶನದಲ್ಲಿ ಒಪ್ಪ ಓರಣವಿಲ್ಲದ ವೇಷ, ಶಿಸ್ತಿಲ್ಲದ ಹೆಜ್ಜೆ, ಇಂತಹ ಪ್ರದರ್ಶನಕ್ಕೆ ಮಹಿಳೆಯೊಬ್ಬಳನ್ನು ಬಳಸಿಕೊಳ್ಳಲಾಗಿತ್ತು. ಇಲ್ಲಿ ಗಮನಿಸಬೇಕಾದ ಎರಡು ವಿಚಾರಗಳೆಂದರೆ ಒಂದು ಅನುಚಿತ ಎನ್ನಬಹುದಾದಂತಹ ಪ್ರಸ್ತುತಿ ಇನ್ನೊಂದು ಚಿಕ್ಕಮೇಳದ ತಿರುಗಾಟದಲ್ಲಿ ಮಹಿಳೆಯರ ಭಾಗವಹಿಸುವಿಕೆ?? ಮಧ್ಯರಾತ್ರಿಯವರೆಗೂ ತಿರುಗಾಟ ನಡೆಸುವ ಈ ಚಿಕ್ಕ ಮೇಳಗಳಲ್ಲಿ ಇಲ್ಲಿಯವರೆಗೆ ಮಹಿಳೆಯರು ಕಾಣಿಸಿಕೊಂಡದ್ದು ಇಲ್ಲವೆನ್ನಬಹುದು. ಮೇಳಗಳ ಯಕ್ಷಗಾನ ಪ್ರದರ್ಶನದಲ್ಲಿ ಮಹಿಳೆಯರು ಭಾಗವಹಿಸುತ್ತಾರೆ ಎಂಬುದು ನಿಜವೇ. ಅಲ್ಲಿ ಸವಾಲುಗಳಿದ್ದರೂ ಗೌರವದಿಂದ ಮಹಿಳೆಯರನ್ನು ನಡೆಸಿಕೊಳ್ಳಲಾಗುತ್ತದೆ. ಆದರೆ ಶಿಸ್ತಿನ ಕೊರತೆ, ವಾಹನ ಸೌಕರ್ಯ, ಚಿಕ್ಕ ತಂಡ, ತಿರುಗಾಟ ನಡೆಸುವ ಪರಿಸರದಲ್ಲಿ ಸುರಕ್ಷತೆ ಬಗ್ಗೆ ಅನಿಶ್ಚಿತತೆ… ಚಿಕ್ಕಮೇಳದಂತಹಾ ಈ ವ್ಯವಸ್ಥೆಯಲ್ಲಿ ಮಹಿಳೆಯರ ತೊಡಗಿಸಿಕೊಳ್ಳುವಿಕೆ ಹುಬ್ಬೇರಿಸುವಂತೆ ಮಾಡಿದೆ. ಇಂತಹ ಒಂದು ಬೆಳವಣಿಗೆಯಿಂದಾಗಿ ಚಿಕ್ಕ ತಂಡವಾಗಿ ಮನೆಮನೆಗೆ ಹೋಗುವ ಈ ಮಹಿಳಾ ಕಲಾವಿದರ ಭದ್ರತೆಯ ಬಗ್ಗೆ ಪ್ರಶ್ನೆ ಮೂಡುವುದು ಸಹಜವೇ. ಮುಂದೊಂದು ದಿನ ಇದು ಅನೈತಿಕ ಚಟುವಟಿಕೆ ನಡೆಸಲು ದಾರಿ ಮಾಡಿ ಕೊಡಬಹುದೇ ಅನ್ನೋದನ್ನೂ ಯೋಚಿಸಬೇಕಿದೆ.

**ಯಾ**ವುದೇ ಕಲೆ ಪ್ರವಾಹೋಪಾದಿಯಲ್ಲಿ ಚಲನಶೀಲತೆಯನ್ನು ಪಡ್ಕೊಳ್ಳೋ ಹೊತ್ತಲ್ಲಿ ಇಂತಹ ಅಪಸವ್ಯಗಳು ಸೇರ್ಪಡೆಯಾಗೋದು ನಿರೀಕ್ಷಿತವೇ. ಇತ್ತೀಚಿಗೆ ಇಂತಹ ಸಾಕಷ್ಟು ಅಪಸವ್ಯಗಳನ್ನು ಯಕ್ಷಗಾನದಲ್ಲಿ ನೋಡುತ್ತಿದ್ದೇವೆ. ಹೋಟೆಲ್ ನಲ್ಲಿ ಫುಡ್ ಸರ್ವ್ ಮಾಡಲು ಯಕ್ಷಗಾನ ವೇಷಧಾರಿಗಳನ್ನು ಬಳಸಿಕೊಳ್ಳುವುದು, ಮದುವೆ ಮನೆಗಳಲ್ಲಿ ಸ್ವಾಗತದ ಗೊಂಬೆ ಹಾಗೂ ಉತ್ಸವದ ಗೊಂಬೆಗಳಂತೆ ಯಕ್ಷಗಾನ ವೇಷಗಳನ್ನು ಕುಣಿಸುವುದು, ಸಿನಿಮಾ ಹಾಡುಗಳಲ್ಲಿ ಯಕ್ಷಗಾನ ವೇಷಧಾರಿಗಳಿಂದ ವೇಷ ಹಾಕಿಸುವುದು ಇಂತಹ ಅಪಸವ್ಯಗಳನ್ನು ಬೆಂಬಲಿಸಲಾರೆವು ಎಂಬ ಗಟ್ಟಿ ನಿಲುವು ಕಲಾವಿದರಲ್ಲಿ ಸಂಘಟಕರಲ್ಲಿ ಅಭಿಮಾನಿಗಳಲ್ಲಿ ಮೂಡಬೇಕು. ಇಂತಹ ಘಟನೆಗಳು ನಡೆದಾಗ ಅದಕ್ಕೆ ಕಾರಣರಾದವರಿಗೆ ಕಲೆಯ ಮೌಲ್ಯವನ್ನು ತಿಳಿಸಿ, ಮುಂದೆ ಅದು ನಡೆಯದಂತೆ ಸೂಚಿಸುವುದು ಕಲಾಪ್ರೇಮಿಗಳ ಕರ್ತವ್ಯ.


**ಕ**ಳೆದ ಕೆಲ ದಿನಗಳ ಈ ಬೆಳವಣಿಗೆ ಯಕ್ಷಾಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದೆ, ಜೊತೆಗೆ ಚಿಕ್ಕಮೇಳಕ್ಕೆ ನಿಷೇಧ ಹೇರಬೇಕು ಎಂದೂ ಆಗ್ರಹಿಸಿದ್ದಾರೆ. ಇಂತಹ ಅಭಿಪ್ರಾಯಗಳು ಮೂಡಿ ಬರುತ್ತಿರುವಂತೆಯೇ ಮಳೆಗಾಲದಲ್ಲಿ ಜೀವನ ಸಾಗಿಸುವ ನಿಜ ಕಲಾವಿದರ ಹಿತದೃಷ್ಟಿಯಿಂದ ಕಲಾವಿದರು ಸಂಘಟಕರು ಎಚ್ಚೆತ್ತುಕೊಂಡಿದ್ದಾರೆ. ಜುಲೈ 19ನೆ ತಾರೀಕಿಗೆ ಬಿಸಿರೋಡ್ ನ ಸ್ಪರ್ಷ ಕಲಾಮಂದಿರದಲ್ಲಿ ಅಕಾಡೆಮಿಯ ಮಾಜಿ ಸದಸ್ಯ, ಹಿರಿಯ ಕಲಾವಿದ ಸರಪಾಡಿ ಅಶೋಕ್ ಶೆಟ್ಟಿ ನೇತೃತ್ವದಲ್ಲಿ ಸಮಾಲೋಚನಾ ಸಭೆ ನಡೆದಿದೆ. ಸಭೆಯಲ್ಲಿ ಚಿಕ್ಕ ಮೇಳಗಳಿಗೆ ನಿರ್ದಿಷ್ಟ ನಿಯಮಾವಳಿಗಳನ್ನು ರೂಪಿಸುವ ಕುರಿತು ಸಮಾಲೋಚನೆ ನಡೆಯಿತು.

**ಚಿ**ಕ್ಕ ಮೇಳ ಹೇಗಿರಬೇಕು, ಯಾವ ವ್ಯಾಪ್ತಿ, ತಿರುಗಾಟ ನಡೆಸುವ ಕಲಾವಿದರಿಗೆ ಇರಬೇಕಾದ ಅರ್ಹತೆ ಜೊತೆಗೆ ಇರನಬೇಕಾದ ಪರಿಕರ ಇವುಗಳ ಚರ್ಚೆ ನಡೆದಿದೆ. ಸೂಚಿತ ನಿಯಮಗಳಂತೆ ಚಿಕ್ಕಮೇಳಗಳು ಆಯಾ ದೇವಸ್ಥಾನದ ಅನುಮತಿ ಪತ್ರ ಹೊಂದಿರಬೇಕು, ಮೇಳದ ಕಲಾವಿದರಾಗಿದ್ದರೆ ಆ ಮೇಳದ ಅನುಮತಿ ಪತ್ರ, ತಿರುಗಾಟ ನಡೆಸುವ ಊರಿನ ಗ್ರಾಮ ಪಂಚಾಯತ್ ನಿಂದ ಅನುಮತಿ ಪತ್ರ, ಹಾಗೂ ಆಯಾ ಊರಿನ ಪೋಲಿಸ್ ಠಾಣೆಯಿಂದಲೂ ಅನುಮತಿ ಪಡೆಯಬೇಕು ಎಂಬ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

ಈ ಸಭೆಯಲ್ಲಿ ಕಲಾವಿದರಾದ ದಿನೇಶ್ ರೈ ಕಡಬ ಚಿಕ್ಕಮೇಳಗಳ ವ್ಯವಸ್ಥಾಪಕರು, ಸಂಚಾಲಕರು ಪ್ರತಿನಿಧಿಗಳು ಭಾಗವಹಿಸಿದ್ದರು. ಯಕ್ಷಗಾನದಲ್ಲಿ ನಡೆಯೋ ಅಪಸವ್ಯಗಳನ್ನು ತಡೆಯೋದಕ್ಕೆ ತೆಗೆದುಕೊಂಡ ಈ ನಿರ್ಧಾರ ಉತ್ತಮ ಬೆಳವಣಿಗೆ ಎನ್ನಬಹುದು – ***ಶುಭಾಶಯ, ಸಂಪಾದಕರು***

---

## ಯಕ್ಷಗಾನದಲ್ಲಿ ಮೆರೆಯಲಿದೆ ಗುಳಿಗನ ಪ್ರತಾಪ




ತುಳುನಾಡಿನಾದ್ಯಂತ ಸಂಚಲನ ಮೂಡಿಸಿದ್ದ ಕಾರಣಿಕಶಕ್ತಿ ಗುಳಿಗನ ಹುಟ್ಟು- ಬದುಕು, ಶಕ್ತಿಯ ನೆಲೆಯನ್ನು ತುಳುರಂಗಭೂಮಿಯಲ್ಲಿ ವಿರಾಟ್ ದರ್ಶನ ಮಾಡಿಸಿದ ಕ್ರಿಯೇಟಿವ್ ಡೈರೆಕ್ಟರ್ ವಿಜಯ್ ಕುಮಾರ್ ಕೊಡಿಯಾಲ್ ಬೈಲ್ ರ ಶಿವದೂತ ಗುಳಿಗ ಯಕ್ಷಗಾನ ರಂಗಸ್ಥಳದಲ್ಲೂ ಅಬ್ಬರಿಸಲು ತಯಾರಾಗಿದ್ದು ಈ ಕಥಾಭಾಗವನ್ನು ಶಿವಕಲ್ಯಾಣ್ ರವರು ಯಕ್ಷಗಾನ ಪ್ರಸಂಗವಾಗಿ ರಚಿಸಿದ್ದಾರೆ. ತೆಂಕು ತಿಟ್ಟಿನ ಮೇಳವಾದ ಬಪ್ಪನಾಡು ಮೇಳದಲ್ಲಿ ಈ ಪ್ರಸಂಗ ಪ್ರದರ್ಶನ ಕಾಣಲಿದೆ. ವಿಜಯ್ ಕುಮಾರ್ ಕೊಡಿಯಾಲ್ ಬೈಲ್ ರವರ ಸಲಹೆ ಸಹಕಾರ ಈ ಪ್ರದರ್ಶನಕ್ಕೆ ಇರಲಿದೆ. ಅಂದ ಹಾಗೆ ಗುಳಿಗನ ಪಾತ್ರದಲ್ಲಿ ನಾಟಕದಲ್ಲಿ ಕಾಣಿಸಿಕೊಂಡಿದ್ದ ಪಾತ್ರಧಾರಿಯೇ ಕಾಣಿಸಿಕೊಳ್ಳಲಿದ್ದಾರೆ. ಗುಳಿಗ ಪಾತ್ರದಲ್ಲಿ ಸ್ವರಾಜ್ ಶೆಟ್ಟಿ ಅಭಿನಯಿಸಿ ಸಾಕಷ್ಟು ಪ್ರಖ್ಯಾತರಾಗಿದ್ದರು. ಇವರು ರಿಷಭ್ ಶೆಟ್ಟಿ ನಿರ್ದೇಶನದ ಕಾಂತಾರ ಸಿನಿಮಾದಲ್ಲು ಗುರುವ ಪಾತ್ರದಲ್ಲಿ ನಟಿಸಿ ಜನಮನ ಗೆದ್ದಿದ್ದಾರೆ. ಶೇಷಶಯನ ವಿಷ್ಣುವಿನ ಕ್ಷೀರಸಾಗರ ಬಿಂಬಿಸುವ ದೃಶ್ಯಗಳು, ಶಿವಪಾರ್ವತಿ ವಿರಾಜಮಾನರಾಗುವ ಕೈಲಾಸ ಪರ್ವತ, ನೆಲವುಲ್ಲ ಸಂಕೆಯೆ ಅಬ್ಬರ ಇತ್ಯಾದಿ ಪರಿಕಲ್ಪನೆ, ಭಾರಿ ವೆಚ್ಚದಲ್ಲಿ ವಿಭಿನ್ನವಾಗಿ ರೂಪಿಸಿದ ರಂಗವೇದಿಕೆ. ಕ್ಷಣಾರ್ಧದಲ್ಲಿ ಬದಲಾಗುವ ಕೈಲಾಸ ಮತ್ತು ವೈಕುಂಠಗಳ ದೃಶ್ಯಗಳು, ಮಿಂಚು ಹರಿಸುವ ಬೆಳಕಿನ ಚಿತ್ತಾರದಲ್ಲಿ ರಂಗ ವಿನ್ಯಾಸಗಳಿಂದ ತುಳು ರಂಗಭೂಮಿಯಲ್ಲಿ ಯಶಸ್ಸು ಕಂಡಿರೋ ಶಿವದೂತ ಗುಳಿಗ ಯಕ್ಷಗಾನದಲ್ಲಿ ಹೇಗೆ ಮೋಡಿ ಮಾಡಲಿದೆ ಅನ್ನೋದನ್ನು ಕಾದು ನೋಡ್ಬೇಕು. ಸಂಪೂರ್ಣ ಕತ್ತಲ ನಡುವೆ ಗುಳಿಗ ದೈವ ವೇದಿಕೆಗೆ ಪ್ರವೇಶವಾಗುವ ದೃಶ್ಯ, ಗ್ರಾಫಿಕ್ಸ್ ತಂತ್ರಜ್ಞಾನದಲ್ಲಿ ಕತ್ತಲಲ್ಲಿ ಚಲಿಸುವ ಗುಳಿಗ ದೈವದ ಘನಘೋರ ಮುಖ, ಜೀಟಿಗೆ ಇವೆಲ್ಲ ನಾಟಕದ ಪ್ರಮುಖ ಅಂಶಗಳಾಗಿದ್ದವು.

## ತಾನ್ವಿಷ್ ಹುಟ್ಟುಹಬ್ಬ; ನಾದ ನೂಪುರ ಟ್ರಸ್ಟ್ ಆಶ್ರಯದಲ್ಲಿ ಕಲಾವಿದರಿಗೆ ವಿಮೆ



## ಪ್ರಸಂಗ ವಿಮರ್ಶೆಯ ವಿಜೇತರಿಗೆ ಅಭಿನಂದನೆ



**ದಿ**ನಾಂಕ 12–07–2023 ರ ಬುಧವಾರದಂದು ಬ್ರಹ್ಮಾವರ ತಾಲೂಕು ವಂಡಾರು ಗ್ರಾಮದ ಮಾರ್ವಿ ವಿಶ್ವೇಶ್ವರ ದೇವಸ್ಥಾನದಲ್ಲಿ ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ (ಎನ್.ವೈಟಿ) ವಂಡಾರು ಇದರ ಆಶ್ರಯದಲ್ಲಿ ಯಕ್ಷ ಪ್ರೇಮಿ ಶ್ರೀಯುತ ಸುಧೀರ್ ಅಮೀನ್ ಕೊಕ್ಕರ್ಣೆ ಇವರ ಪುತ್ರ ತಾನ್ವಿಷ್ ಇವರ 4 ನೇ ವರ್ಷದ ಜನ್ಮ ದಿನದ ಪ್ರಯುಕ್ತ, ಯಕ್ಷಗಾನದ ಕಲಾವಿದರಿಗೆ ಹಾಗೂ ರಂಗ ಸಹಾಯಕ ಕಾರ್ಮಿಕರಿಗೆ ಒಂದು ವರ್ಷ ಅವಧಿಯ ಆರೋಗ್ಯ ವಿಮೆ ವಿತರಿಸಲಾಯಿತು. 13 ಜನ ಕಲಾವಿದರು ಇಬ್ಬರು ರಂಗ ಸಹಾಯಕ ಕಾರ್ಮಿಕರು ಮತ್ತು ಐದು ಜನ ಕಲಾವಿದರಲ್ಲದ ಸ್ಥಳೀಯ ಅರ್ಹ ಫಲಾನುಭವಿಗಳನ್ನು ಗುರುತಿಸಿ ವಿಮೆಯ ಪ್ರತಿಯನ್ನು ಹಸ್ತಾಂತರಿಸಲಾಯಿತು.

**ಇ**ದೇ ಸಂದರ್ಭ ಜೂನ್ 10 ರಂದು ಬ್ರಹ್ಮಾವರದಲ್ಲಿ ನಡೆದ ದಾನ ಚಿಂತಾಮಣಿ ಪ್ರಸಂಗದ ವಿಮರ್ಶೆ ಬರೆಯುವ ಸ್ಪರ್ಧೆಯಲ್ಲಿ ವಿಜೇತರಾದ ಉದಯ್ ಶೆಟ್ಟಿ ಪಡುಕೆರೆಯವರಿಗೆ ಬಹುಮಾನದ ಮೊತ್ತ 5000 ರುಪಾಯಿಗಳ ಚೆಕ್ ಹಸ್ತಾಂತರಿಸಿ ಶಾಲು ಹೊದಿಸಿ ಅಭಿನಂದಿಸಲಾಯಿತು.



**ಮಾ। ತಾನ್ವಿಷ್**

**ಈ** ವೇಳೆ ಮಾತನಾಡಿದ ಉದಯ್ ಶೆಟ್ಟಿ ಪಡುಕೆರೆಯವರು "ನಾನು ಬರೆದಿರುವ ವಿಮರ್ಶೆಗೆ ಬಹುಮಾನ ಬಂದಿರುವುದು ಸಂತಸವಾಗಿದೆ. ಯಕ್ಷಗಾನ ಪ್ರಸಂಗ ರಚನೆ ಎನ್ನುವುದು ಇಷ್ಟ ಬಂದ ಹಾಗೆ ಬರೆಯುವುದು ಎಂದಾಗಿದೆ. ಆದರೆ ಪ್ರಸಂಗವನ್ನು ಗಮನಿಸಿ ವಿಮರ್ಶೆ ಮಾಡುತ್ತಾರೆ ಎಂದು ಗೊತ್ತಾದಾಗ ಯಕ್ಷಗಾನದಲ್ಲಾಗುವ ಅಪಸವ್ಯಗಳನ್ನು ತಡೆಯಬಹುದು. ಇಷ್ಟ ಬಂದ ಹಾಗೆ ಪ್ರದರ್ಶನ ನೀಡಲು ಅವಕಾಶ ಆಗುವುದಿಲ್ಲ. ದಾನಚಿಂತಾಮಣಿ ಪ್ರಸಂಗದ ಕಥಾವಸ್ತು ಚೆನ್ನಾಗಿದ್ದು, ನಾನು ನೋಡಿದ ಯಕ್ಷಗಾನಗಳಲ್ಲಿ ಉತ್ತಮ ಪ್ರಸ್ತುತಿಯಾಗಿದೆ. ಶ್ರೀ ಸನ್ನಿಧಿಯಲ್ಲಿ ಬಹುಮಾನ ಸ್ವೀಕರಿಸುವುದಕ್ಕೆ ಸಂತೋಷವಿದೆ." ಎಂದರು.

**ಸು**ಧೀರ್ ಅಮೀನ್ ಮಾತನಾಡಿ ಈಗ ನೀಡಲಾದ ವಿಮೆಯಲ್ಲಿ ಯಾವೆಲ್ಲ ಸೌಲಭ್ಯಗಳನ್ನು ಫಲಾನುಭವಿಗಳು ಪಡೆದುಕೊಳ್ಳಬಹುದು ಎಂಬುದರ ಬಗ್ಗೆ ಸವಿವರವಾದ ಮಾಹಿತಿ ನೀಡಿದರು. ಏನೇ ಸಮಸ್ಯೆಗಳಾದಾಗ 1 ಸಾವಿರದಿಂದ ಹಿಡಿದು ಸುಮಾರು 10 ಲಕ್ಷದವರೆಗೆ ಪ್ರಯೋಜನ ಪಡೆಕೊಳ್ಳಬಹುದು ಎಂದರು. ಮಾರ್ವಿ ಶಾಲೆಯ ಮುಖ್ಯೋಪಾಧ್ಯಾಯರಾದ ಜಯಪ್ರಕಾಶ್ ಶೆಟ್ಟಿಯವರು ಕಾರ್ಯಕ್ರಮ ನಿರೂಪಿಸಿದರು ನಾದ ನೂಪುರ ಯಕ್ಷೋತ್ಥಾನ ಟ್ರಸ್ಟ್ ನ ಮುಖ್ಯಸ್ಥರಾದ ಶ್ರೀ ಗೋವಿಂದ ವಂಡಾರು ಧನ್ಯವಾದ ಸಮರ್ಪಣೆ ಮಾಡಿದರು. ಸುಧೀರ್ ಅಮೀನ್ ರವರ ಕುಟುಂಬಸ್ಥರು, ದೇವಸ್ಥಾನದ ಅರ್ಚಕರಾದ ಶ್ರೀ ಮಂಜುನಾಥ ಉಪ್ಪೂರು, ಬಿಲ್ಲಾಡಿ ಪಂಚಾಯತ್ ನ ಮಾಜಿ ಅಧ್ಯಕ್ಷರಾದ ವೆಂಕಪ್ಪ ಕುಲಾಲ್, ಸ್ಮರಣಿಕೆಯ ಪ್ರಾಯೋಜಕರು ಮಂಜುನಾಥ ಅಮೀನ್, ಮೊಗವೀರ ಯುವ ಸಂಘಟನೆಯ ಮಂದಾರ್ತಿ ಘಟಕದ ಮಾಜಿ ಅಧ್ಯಕ್ಷರು ಸಂದೀಪ್ ಅಮೀನ್ ಕುರಾಡಿ ಉಪಸ್ಥಿತರಿದ್ದರು. ಕಲಾವಿದರಾದ ಚಂದ್ರ ಕುಲಾಲ್ ಆವರ್ಸೆ, ರಾಘವೇಂದ್ರ ಉಳ್ಳೂರು, ರಾಮ ಉಳ್ಳೂರು 74, ರಾಘವೇಂದ್ರ ಹೆಂಗವಳ್ಳಿ, ಕೃಷ್ಣ ಕುಲಾಲ್ ಹೆಂಗವಳ್ಳಿ, ಸುರೇಶ್ ಕುಲಾಲ್ ಆವರ್ಸೆ, ರಮೇಶ್ ವಂಡಾರು, ಪೂರ್ಣ ಚಂದ್ರ ಹೆಂಗವಳ್ಳಿ, ರಂಗ ಸಹಾಯಕರಾದ ರಾಮ ನಾಯಕ್, ಸತೀಶ್ ನಾಯಕ್, ಇನ್ನುಳಿದ ಫಲಾನುಭವಿಗಳಿಗೆ ವಿಮೆಯ ಬಾಂಡ್ ಪ್ರತಿಯನ್ನು ಹಸ್ತಾಂತರಿಸಲಾಯಿತು.

ಚಿರಂಜೀವಿ ತಾನ್ವಿಷ್ ನ ಜನ್ಮದಿನಕ್ಕೆ ನಾದ ನೂಪುರ ಟ್ರಸ್ಟ್ ನ ಬಳಗದವರು ಶುಭ ಕೋರಿದರು. ಹಿರಿಯರು ಹಾಗೂ ದೇವಸ್ಥಾನದ ಅರ್ಚಕರಾದ ಮಂಜುನಾಥ ಉಪ್ಪೂರರು ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಪುಟಾಣಿಗೆ ಆಶೀರ್ವದಿಸಿದರು.

*ಗಮನಿಸಿ – ನಾ.ನೂ. ಟ್ರಸ್ಟ್ ನ ಸಮಾಜಮುಖಿ ಕಾರ್ಯಗಳಲ್ಲಿ ಭಾಗಿಯಾಗಲು ಇಚ್ಛಿಸುವ ಸಹೃದಯರು ಹಾಗೂ ಸ್ವಯಂ ಸೇವಕರು ಸಂಪರ್ಕಿಸಿ – 8277560171*

# ಬಡಗುತಿಟ್ಟು ಯಕ್ಷರಂಗದ ಶ್ರೀರಾಮ – ಮೇರು ಕಲಾವಿದ ಆರ್ಗೋಡು ಮೋಹನದಾಸ ಶೆಣೈ




ಆರ್ಗೋಡು ಮೋಹನದಾಸ ಶೆಣೈ


**ಬ್ರ**ಹ್ಮಾವರ–ಕುಂದಾಪುರ ಪ್ರಾಂತ್ಯದಲ್ಲಿ ಪರಿಚಿತವಾದ ನಡುತಿಟ್ಟಿನ ಎರಡು ಪ್ರಬೇಧಗಳಾದ ಹಾರಾಡಿ ಮಟ್ಪಾಡಿ ತಿಟ್ಟುಗಳ ಅನುಸರಣೆ ಅನುಕರಣೆ ಇಲ್ಲದೇ ತನ್ನದೇ ಶೈಲಿಯಲ್ಲಿ ಮುಂದುವರಿದು ಆರ್ಗೋಡು ಶೈಲಿಯನ್ನು ಹುಟ್ಟು ಹಾಕಿದವರು ಶೆಣೈಯವರು. ಇದೇ ರೀತಿ ಈ ಎರಡೂ ಶೈಲಿಯನ್ನು ಅನುಕರಿಸದೆ ಮೇರು ಕಲಾವಿದರಾಗಿ ಬಡಗುತಿಟ್ಟಿನಲ್ಲಿ ಮೆರೆದ ಇನ್ನೊಬ್ಬ ಕಲಾವಿದ ದಿ.ನಗರ ಜಗನ್ನಾಥ ಶೆಟ್ಟರು. ಸ್ವತಃ ಭಾಗವತರಾದ ತಂದೆ ಮತ್ತು ಹತ್ತಾರು ಕಲಾವಿದರಿದ್ದ ಕುಟುಂಬದಿಂದ ಬಂದ ಶೆಣೈಯವರು ಮಾತುಗಾರಿಕೆಯಿಂದ ಬಡವಾಗಿದ್ದ ಬಡಗುತಿಟ್ಟನ್ನು ತನ್ನ ಮಾತುಗಾರಿಕೆಯಿಂದ ಎತ್ತಿ ಹಿಡಿದವರಲ್ಲಿ ಒಬ್ಬರು.

ಸಮಾಜದ ಮೇಲ್ವರ್ಗದ ಜನರು ಯಕ್ಷಗಾನದಲ್ಲಿ ತೊಡಗಿಸಿಕೊಳ್ಳಲು ಹಿಂಜರಿಯುತಿದ್ದ 50–60ರ ದಶಕದಲ್ಲಿ ಮಡಿವಂತ ಜಿ.ಎಸ್.ಬಿ.ಕೊಂಕಣಿ ಜನಾಂಗದಲ್ಲಿ ಜನಿಸಿದ ಮೋಹನದಾಸ ಶೆಣೈಯವರು ಈ ರಂಗದಲ್ಲಿ ಸಾಧಿಸಿದ್ದು ಇತರರಿಗೆ ಅನುಸರಣೀಯ ಅನುಕರಣೀಯ ಮತ್ತು ಮಾದರಿ. ಆ ಕಾಲದಲ್ಲಿ ಮೇಲ್ವರ್ಗದಲ್ಲಿ ಕಾಣಸಿಗುವ ಬೆರಳೆಣಿಕೆಯ ಕಲಾವಿದರಲ್ಲಿ ಶೆಣೈಯವರೂ ಒಬ್ಬರು. ಅದಕ್ಕೆ ಅವರು ಬೆಳೆದ ವಾತಾವರಣ ಮತ್ತು ಕೌಟುಂಬಿಕ ಹಿನ್ನಲೆಯೇ ಸ್ಫೂರ್ತಿ. ಮನೆ ಮಾತು ಕೊಂಕಣಿಯಾದರೂ ಕನ್ನಡ ಜ್ಞಾನ ಭಂಡಾರವಾಗಿ ಯಕ್ಷಗಾನ ಪರಂಪರೆಯ ಕೊಂಡಿಯಾಗಿ ಶಿಸ್ತು–ಗತ್ತಿನ ಸುಸಂಸ್ಕೃತ ಕಲಾವಿದನಾಗಿ ಅಪಾರ ಪ್ರತ್ಯುತ್ಪನ್ನ ಮತಿತ್ವ, ಶ್ರುತಿಬದ್ಧ ಸುಶ್ರಾವ್ಯ ಸ್ವರ, ಪ್ರಬಲ ಪಾಂಡಿತ್ಯ–ರಾಮಾಯಣ–ಮಹಾಭಾರತ–ಭಾಗವತಗಳ ನಿಖರ ಅನುಭವದಿಂದ ಶೆಣೈಯವರು ಇತರರಿಗೆ ಮಾದರಿಯಾಗಿ ಬೆಳೆದು ಬಂದಿದ್ದಾರೆ. ಆ ಕಾಲದ ಅವರ ಸಮಕಾಲೀನರಾದ ನಗರ ಜಗನ್ನಾಥ ಶೆಟ್ಟರಲ್ಲಿ ಈ ಎಲ್ಲಾ ಅಂಶಗಳನ್ನು ಗಮನಿಸಬಹುದಾಗಿದೆ. ಅವರ ಒಡನಾಟವೂ ಶೆಣೈಯವರಿಗೆ ಬಹುಕಾಲ ಲಭಿಸಿತ್ತು.

**ಉ**ಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕಮಲಶಿಲೆ ಸಮೀಪ ಆರ್ಗೋಡು ಎಂಬಲ್ಲಿ ಹಿರಿಯ ಭಾಗವತ ಗೋವಿಂದರಾಯ ಶೆಣೈ ಹಾಗೂ ಮುಕ್ತಾಬಾಯಿಯವರ ಪುತ್ರನಾಗಿ ಜನಿಸಿದ ಶೆಣೈಯವರು ಹಳ್ಳಿಹೊಳೆಯ ಹಿರಿಯ ಪ್ರಾಥಮಿಕ ಶಾಲೆ ಮತ್ತು ಶಂಕರನಾರಾಯಣದಲ್ಲಿ ಪ್ರೌಢ ಶಿಕ್ಷಣ ಪಡೆದರು. ಆ ಬಳಿಕ ಯಕ್ಷಗಾನ ಬಣ್ಣದ ಲೋಕವನ್ನು ಪ್ರವೇಸಿಸಿದರು. ಹಿರಿಯಡ್ಕ ಮೇಳದ ಕಲಾವಿದನಾಗಿ ಸುಧನ್ವನಾಗಿ ರಂಗವೇರಿದ ಇವರು ಮತ್ತೆ ಹಿಂದಿರುಗಿ ನೋಡಲಿಲ್ಲ. ಅದೇ ಮೇಳದಲ್ಲಿ ಮೂರು ವರ್ಷ ದುಡಿದ ಇವರು ಆ ಮೇಳದ ಸಂಚಾಲಕನಾಗಿ ಎರಡು ವರ್ಷ ಮೇಳವನ್ನು ಮುನ್ನಡಿಸಿದರು. ಸಾಲಿಗ್ರಾಮ ಪೆರ್ಡೂರು ಕುಮಟಾ, ಮುಲ್ಕಿ, ಕಮಲಶಿಲೆ, ಮಂದಾರ್ತಿ, ಅಮೃತೇಶ್ವರಿ ಮುಂತಾದ ಮೇಳಗಳಲ್ಲಿ ಸುಧೀರ್ಘ ಕಲಾಸೇವೆ ಮಾಡಿದ ಇವರು ಸದ್ಯ ಶ್ರೀ ಸಾಲಿಗ್ರಾಮ ಮೇಳದ ಪ್ರಧಾನ ಕಲಾವಿದರಾಗಿದ್ದು ಕಳೆದ ಕೆಲ ವರ್ಷಗಳ ಹಿಂದೆ ವೃತ್ತಿ ಮೇಳಕ್ಕೆ ವಿದಾಯ ಘೋಷಿಸಿದ್ದಾರೆ. "ಗರಿಕೆಯಿಲ್ಲದೆ ಗಣಪತಿ ಪೂಜೆ ಇಲ್ಲ" ಎಂಬಂತೆ ಶ್ರೀ ರಾಮ ಪ್ರಧಾನವಾದ ಪ್ರಸಂಗಗಳು ಶೆಣೈಯವರಿಲ್ಲದೆ ಕಳೆಗಟ್ಟದು. ರಾಮನೆಂದರೆ ಶೆಣೈ; ಶೆಣೈಯವರೆಂದರೆ ರಾಮ, ಎಂಬಷ್ಟು ಪ್ರಸಿದ್ಧಿ ಅವರ ಶ್ರೀ ರಾಮನ ಪಾತ್ರ ಚಿತ್ರಣ. ಸುಂದರವಾದ ಆಳಂಗ, ಸೌಮ್ಯ, ಶ್ರುತಿಬದ್ಧ ಮಾತುಗಾರಿಕೆಯಿಂದ ಇವರ ರಾಮನ ಪಾತ್ರ ಚಿತ್ರಣ ಅಮೋಘ. ಕುಶಲವರ ಕಾಳಗ ಮತ್ತು ರಾಮಾಂಜನೇಯದ ರಾಮನ ಪಾತ್ರಗಳು ಯಕ್ಷಗಾನ ವಿಮರ್ಶಕರ ಮೆಚ್ಚುಗೆಗೆ ಪಾತ್ರವಾದವುಗಳು. ಶ್ರೀ ಪೆರ್ಡೂರು ಮತ್ತು ಮೂಲ್ಕಿ ಮೇಳದಲ್ಲಿ ಕುಮಟಾ ಗೋವಿಂದ ನಾಯ್ಕರ ಹನುಮಂತ, ಶೆಣೈಯವರ ರಾಮ, ಎಂ.ಎ.ನಾಯ್ಕ್ ಮತ್ತು ಮುರೂರು ವಿಷ್ಣು ಭಟ್ಟರ ಸೀತೆಯ ಪಾತ್ರಗಳು ಆಯಾ ಮೇಳಗಳಲ್ಲಿ ಹೊಸ ಪ್ರೇಕ್ಷಕರನ್ನು ಹುಟ್ಟು ಹಾಕಿದವು. ಪೆರ್ಡೂರು ಮೇಳದಲ್ಲಿ ಗೋಪಾಲಾಚಾರ್ ಮತ್ತು ಕಣ್ಣಿಮನೆಯವರ ಲವಕುಶನಿಗೆ ಇವರ ರಾಮ, ಕುಶಲವ ಪ್ರಸಂಗದ ಮುಖ್ಯ ಆಕರ್ಷಣೆಯಾಗಿತ್ತು. ಮೂಲ್ಕಿ ಮೇಳದ ಸೀತಾಪಾರಮ್ಯ ಪ್ರಸಂಗದ ರಾಮನ ಪಾತ್ರವೂ ಅಪಾರ ಜನಮನ್ನಣೆ ಪಡೆದಿತ್ತು.



**ಯಾ**ವುದೇ ಪಾತ್ರವನ್ನು ತನ್ನ ಸ್ವಂತ ಶೈಲಿಯಿಂದ ಜೀವ ತುಂಬುವ ಶೆಣೈಯವರ ಸೌಮ್ಯ ಪಾತ್ರಗಳಾದ ಶಂತನು, ಭೀಷ್ಮ, ಮಯೂರಧ್ವಜ, ಉಗ್ರಸೇನ, ಕಮಲಭೂಪ, ಋತುಪರ್ಣ, ಮುಂತಾದ ಪಾತ್ರ ನಿರ್ವಹಣೆ ಅಸಾಧಾರಣ. ಶೆಣೈಯವರ ಕಂಠದ ಏರಿಳಿತ ಸೌಮ್ಯ ಪಾತ್ರಕ್ಕೆ ಹೇಳಿ ಮಾಡಿಸಿದಂತಿದ್ದು, ಪ್ರೇಕ್ಷಕರೂ ಅವರನ್ನು ಸೌಮ್ಯ ಪಾತ್ರಗಳಲ್ಲಿ ನೋಡಲು ಹೆಚ್ಚು ಆಸಕ್ತಿ ವಹಿಸುತ್ತಾರೆ. ಹಾಗಾಗಿ ಕೀಚಕ, ಕೌರವ, ಕಂಸ, ಕಾಲನೇಮಿ, ರಾವಣ ಮುಂತಾದ ಅಸುರೀ ಪ್ರವೃತ್ತಿಯ ನಾಯಕ, ಪ್ರತಿ ನಾಯಕನ ಪಾತ್ರ ನಿರ್ವಹಣೆಯಿಂದ ಅವರು ಬಹು ದೂರ ಉಳಿದಿದ್ದಾರೆ. ಇವರ ಬಹು ಪ್ರಸಿದ್ಧಿ ಪಡೆದ ಐತಿಹಾಸಕ ಪ್ರಸಂಗವಾದ ವಸಂತಸೇನೆಯ ಮೈತ್ರೇಯ ಭಟ್ಟನ ಪಾತ್ರ ಯಕ್ಷಗಾನ ಇತಿಹಾಸದಲ್ಲಿ ಒಂದು ದಾಖಲೆ. ಶ್ರೀ ಸಾಲಿಗ್ರಾಮ ಮೇಳ ಮತ್ತು ಪೆರ್ಡೂರು ಮೇಳದಲ್ಲಿ ಶಿರಿಯಾರ ಮಂಜು ನಾಯ್ಕ್ ಮತ್ತು ನಗರ ಜಗನ್ನಾಥ ಶೆಟ್ಟರ ಚಾರುದತ್ತ, ಅರಾಟೆ ಮಂಜುನಾಥ ಮತ್ತು ರಾಮ ನಾಯರಿಯವರ ವಸಂತಸೇನೆ, ಕುಮ್ಟಾ ಗೋವಿಂದ ನಾಯ್ಕರ ಶಕಾರನ ಪಾತ್ರಗಳಿಗೆ ಶೆಣೈಯವರ ವಸಂತಸೇನೆ ಪ್ರಸಂಗದ ಮೈತ್ರೇಯನ ಪಾತ್ರ ಆಯಾ ಮೇಳಗಳಲ್ಲಿ ವಿಶೇಷ ಆಕರ್ಷಣೆಯಾಗಿತ್ತು. ಪೌರಾಣಿಕ ಪ್ರಸಂಗವಲ್ಲದೆ ಹೊಸ ಪ್ರಸಂಗಗಳು ಡೇರೆ ಮೇಳಕ್ಕೆ ದಾಳಿ ಇಟ್ಟಾಗಲೂ ಹಿಂದೆ ಬೀಳದ ಇವರು ನಾಗಶ್ರೀ, ಚೆಲುವೆ ಚಿತ್ರಾವತಿ, ಶೂದ್ರ ತಪಸ್ವಿನಿ, ಭಾಗ್ಯ ಭಾರತಿ ರತಿರೇಖಾ, ಬನಶಂಕರಿ ಮೊದಲಾದ ನವ್ಯ ಪ್ರಸಂಗಗಳಲ್ಲೂ ತಮ್ಮ ಕಲಾಭಿವ್ಯಕ್ತಿ ಮೆರೆಸಿದ್ದಾರೆ. ಶೆಣೈಯವರಿಗೆ ಪ್ರಸಿದ್ಧಿ ನೀಡಿದ ಪಾತ್ರವೆಂದರೆ ನಾಗಶ್ರೀ ಪ್ರಸಂಗದ ಶುಭ್ರಾಂಗ. ದಿ.ನಾವಡರ ಕಲ್ಪನೆಯ ಕೂಸಾದ ನಾಗಶ್ರೀ ಪ್ರಸಂಗದ ಸೌಮ್ಯ ಪಾತ್ರವಾದ ಶುಭ್ರಾಂಗನ ಪಾತ್ರಕ್ಕೆ ಎಪ್ಪತ್ತರ ದಶಕದಲ್ಲಿ ಜೀವ ತುಂಬಿದ ಶಿರಿಯಾರ ಮಂಜುನಾಯ್ಕರ ನಾಯ್ಕರ ನಂತರ ಆ ಪಾತ್ರಕ್ಕೆ ಮರುಹುಟ್ಟು ನೀಡಿದವರು ವಾಸುದೇವ ಸಾಮಗರು ಮತ್ತು ಶೆಣೈಯವರು. ರಂಗದಲ್ಲಿ ಎಷ್ಟು ಪರಿಪೂರ್ಣವಾಗಿ ತನ್ನ ಪಾತ್ರವನ್ನು ಚಿತ್ರಿಸಬಲ್ಲರೋ ಅಷ್ಟೇ ವಿದ್ವತ್ತನ್ನೂ ಚೌಕಿಯಲ್ಲೂ ಹಂಚಿಕೊಳ್ಳುವ ಶೆಣೈಯವರು ಬಡಗುತಿಟ್ಟಿನ ಚೌಕಿಯ ದೊಡ್ಡ ಆಸ್ತಿ. ಕಿರಿಯ ಕಲಾವಿದರಿಗೆ ತನ್ನ ಅನುಭವವನ್ನು ಧಾರೆ ಎರೆಯುವ ಇವರು ತನ್ನ ಜ್ಞಾನವನ್ನು ತೆರೆದ ಪುಸ್ತಕದಂತೆ ಇನ್ನೊಬ್ಬರೊಂದಿಗೆ ಹಂಚಿಕೊಳ್ಳುವ ಧಾರಾಳ ಬುದ್ಧಿಯವರು.



ಹಿರಿ– ಕಿರಿಯರೆನ್ನದೇ ಮೇಳದ ಸರ್ವ ಕಲಾವಿದರಿಗೂ ಇವರು ಅಘೋಷಿತ ಗುರುಗಳು. ಸರ್ವ ಕಲಾವಿದರಿಂದ ಗುರುಗಳೆಂದು ಕರೆಸಿಕೊಳ್ಳುವ ಇವರು ಕಿರಿಯ ಕಲಾವಿದರನ್ನು ತಿದ್ದಿ ತೀಡಿ ಜೊತೆಗೆ ಬೆಳೆಯಗೊಡುವ, ಮತ್ತು ತಿರುಗಾಟಕ್ಕೆ ದಾರಿದೀಪವಾಗಿ ನಿಲ್ಲಬಲ್ಲ ಸರಳ ಸಜ್ಜನ ಸಹೃದಯೀ ಕಲಾವಿದರು. ಯಕ್ಷಗಾನ ಕಲಾಕ್ಷೇತ್ರ ನಿಟ್ಟೂರು ಬೋಜಪ್ಪ ಸುವರ್ಣ ಪ್ರಶಸ್ತಿ. ಶಿರಿಯಾರ ಮಂಜು ನಾಯಕ್ ಪ್ರಶಸ್ತಿ, ಕೆ.ಎಸ್.ನಿಡಂಬೂರು ಪ್ರಶಸ್ತಿ ಸಹಿತ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಯಕ್ಷಗಾನ ಕಲೆಗಾಗಿ ಜೀವನವನ್ನು ಅರ್ಪಿಸಿ ತಾಳಮದ್ದಳೆ ಕ್ಷೇತ್ರವನ್ನೂ ಜೊತೆ ಜೊತೆಗೆ ಶ್ರೀಮಂತಗೊಳಿಸಿ, ಸೀತಾನದಿ ಗಣಪಯ್ಯ ಶೆಟ್ಟರೊಂದಿಗೂ ತಾಳಮದ್ದಳೆಯಲ್ಲಿ ಭಾಗವಹಿಸಿ, ಕಲಾ ಸಾರ್ಥಕ್ಯ ಕಂಡ ಹಿರಿಯ ಕಲಾವಿದ ಶೆಣೈಯವರಿಗೆ ಪ್ರತಿಷ್ಠಿತ ಸೀತಾನದಿ ಪ್ರಶಸ್ತಿ, ಕಾರ್ಕಡ ಶ್ರೀನಿವಾಸ ಉಡುಪ ಪ್ರಶಸ್ತಿ, ಉಡುಪಿ ಯಕ್ಷಗಾನ ಕಲಾರಂಗದ ಪ್ರಶಸ್ತಿಗಳು ಯೋಗ್ಯವಾಗಿಯೇ ಅರಸಿಬಂದಿದೆ. ಬಡಗುತಿಟ್ಟಿನ ಮಂದಾರ್ತಿ, ಕಮಲಶಿಲೆ, ಪೆರ್ಡೂರು, ಅಮೃತೇಶ್ವರಿ ಮುಂತಾದ ಮೇಳಗಳಲ್ಲಿ ಸುದೀರ್ಘಕಾಲ ತಿರುಗಾಟ ಮಾಡಿದ ಅವರು ಕಳೆದ ವರ್ಷ ಸಾಲಿಗ್ರಾಮ ಮೇಳದಲ್ಲಿ ಕೊನೆಯ ತಿರುಗಾಟ ಮಾಡಿ ಸದ್ಯ ನಿವೃತ್ತಿಯಲ್ಲಿದ್ದಾರೆ.

***ಲೇಖಕರು: ಪ್ರೊ.ಎಸ್.ವಿ.ಉದಯ ಕುಮಾರ ಶೆಟ್ಟಿ. ಮಣಿಪಾಲ ಮೊ: 9449367729***

## ಯಕ್ಷ ಸಂಗಮದ ಆಯೋಜನೆಯಲ್ಲಿ ಪೂರ್ಣ ರಾತ್ರಿ ತಾಳಮದ್ದಳೆ




**ಮೂ**ಡುಬಿದಿರೆಯ ಸಮಾಜಮಂದಿರದಲ್ಲಿ ಶನಿವಾರ ಯಕ್ಷ ಸಂಗಮದ 24 ನೇ ವರ್ಷದ ತಾಳ ಮದ್ದಳೆ ಕಾರ್ಯಕ್ರಮ ನಡೆಯಿತು. ಎಂಸಿಎಸ್ ಬ್ಯಾಂಕ್ ನ ಅಧ್ಯಕ್ಷ ಎಂ ಬಾಹುಬಲಿ ಪ್ರಸಾದ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭ ತೆಂಕುತಿಟ್ಟಿನ ಸುಪ್ರಸಿದ್ಧ ಭಾಗವತರಾದ ದಿನೇಶ್ ಅಮಣ್ಣಾಯ ದಂಪತಿಗಳನ್ನು ನಗದು ಪುರಸ್ಕಾರ ಸಹಿತ ಸನ್ಮಾನಿಸಲಾಯಿತು. ಕಲಾವಿದ ಉಜಿರೆ ಅಶೋಕ್ ಭಟ್ ರವರು ಅಭಿನಂದನಾ ಭಾಷಣ ನಡೆಸಿಕೊಟ್ಟರು. 'ರಂಗದ ಸಂಪೂರ್ಣ ಮಾಹಿತಿ ಪೌರಾಣಿಕ ಐತಿಹಾಸಿಕ ಕನ್ನಡ ತುಳು ಪ್ರಸಂಗಗಳಲ್ಲಿ ಅದ್ಭುತ ಲಯ ಪ್ರತಿಯೊಂದು ಹಾಡುವ ಭಾಗವತ ದಿನೇಶ್ ಅಮ್ಮಣ್ಣಾಯರು. ಪಾತ್ರದ ವಯೋಧರ್ಮ ಮನೋಧರ್ಮ ಅರಿತು ಕಲಾವಿದರಲ್ಲಿ ಭಾವಸ್ಫುರಣೆಯಾಗುವಂತೆ ಹಾಡುವ ಒಣ ಮರಳಲ್ಲೂ ಜಲ ಜಿನುಗಿಸುವ ಅವರ ಶೃಂಗಾರ, ಕರುಣ, ಭಕ್ತಿ ಪದ್ಯದ ಪ್ರಸ್ತುತಿ ಅನ್ ಬೀಟೇಬಲ್. ಸಂಗೀತ ನಾಟಕ ಯಕ್ಷಗಾನದ ವಾತಾವರಣದಲ್ಲಿ ಹಿಮ್ಮೇಳ ಮುಮ್ಮೇಳ ಕಲಾವಿದರ ಮನೆಯಲ್ಲಿ ಹುಟ್ಟಿ ಮನೆ ಪಾಠದ ಗಟ್ಟಿತನದೊಂದಿಗೆ ಬೆಳೆದ ಅಮ್ಮಣ್ಣಾಯರು ದಾಮೋದರ ಮಂಡೆಚ್ಚರಿಂದ ಪ್ರಭಾವಿತರಾದವರಾದರೂ ಸ್ವಂತಿಕೆಯಿಂದ ಬೆಳಗಿದವರು ಎಂದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ, ಸಮಾಜ ಮಂದಿರ ಸಭಾಧ್ಯಕ್ಷ ಅಭಯ್ ಚಂದ್ರ ಜೈನ್ ಉದ್ಯಮಿಗಳಾದ ಶ್ರೀಪತಿ ಭಟ್ ಎ.ಕೆ ರಾವ್ ಪ್ರೇಮನಾಥ ಮಾರ್ಲ, ಪುನೀತ್ ಕುಮಾರ್ ಕಟ್ಟೆ ಮಾರು ಭಾಗವಹಿಸಿದ್ದು ಯಕ್ಷಸಂಗಮದ ಅಧ್ಯಕ್ಷ ಸುದರ್ಶನ ಎಂ ಸೌಮ್ಯ ಎಸ್ ಕುಡ್ವ ಹಾಗೂ ಪದಾಧಿಕಾರಿಗಳ ಉಪಸ್ಥಿತರಿದ್ದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ದಿನೇಶ್ ಅಮ್ಮಣ್ಣಾಯರು "ಕಲಾವಿದನ ಸಾಧನೆಗಳ ಹಿಂದೆ ಮನೆಯವರ ತ್ಯಾಗ ಸಹನೆ ಪರಿಶ್ರಮವು ಇದೆ ಎಂಬುದಕ್ಕೆ ತನ್ನ ಪತ್ನಿ ಸುಧಾ ಸಮರ್ಪಕ ದೃಷ್ಟಾಂತ. ಎಂದು ನುಡಿದು, ತನಗೆ ಆರೋಗ್ಯವಿದೆ, ಹಾಡುವ ಸಾಮರ್ಥ್ಯ ಇನ್ನೂ ಇದೆ ಸೀಮಿತಾವಕಾಶಗಳಲ್ಲಿ ಭಾಗವಹಿಸುವ ಮನಸ್ಸಿದೆ" ಎಂದರು. ಶಾಂತರಾಮ ಕುಡ್ವ ಸ್ವಾಗತಿಸಿ ಪ್ರೊ। ಸದಾಶಿವ ಶೆಟ್ಟಿಗಾರ್ ವಂದಿಸಿದರು. ತ್ರಿಶಂಕು ಚರಿತ್ರೆ ಕೃಷ್ಣಾರ್ಜುನ ಪ್ರಸಂಗಗಳ ತಾಳಮದ್ದಳೆ ಜರುಗಿತು.

## ಲಿಂಗತ್ವ ಅಲ್ಪಸಂಖ್ಯಾತರಿಗೆ ಯಕ್ಷ ನಾಟ್ಯ ತರಬೇತಿ

ಲಿಂಗತ್ವ ಅಲ್ಪ ಸಂಖ್ಯಾತರ ಮಾದರಿ ಪುನಶ್ಚೇತನ ಕಾರ್ಯಕ್ರಮಕ್ಕೆ ಉಡುಪಿ ಜಿಲ್ಲಾಡಳಿತ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮುನ್ನುಡಿ ಬರೆದಿದೆ. ಈ ಸಮುದಾಯದ ಬೆಂಬಲಕ್ಕಾಗಿ ನಡೆಸುವ ಕೌಶಲ್ಯಾಬಿವೃದ್ಧಿ ತರಬೇತಿಯಲ್ಲಿ ಯಕ್ಷಗಾನ ಕಲೆಯನ್ನು ಆಯ್ಕೆ ಮಾಡಿಕೊಂಡು ಪ್ರಾಥಮಿಕ ಹೆಜ್ಜೆಗಾರಿಕೆಯ ತರಬೇತಿ ನೀಡಿದೆ. ಈ ಮೂಲಕ ತೃತೀಯ ಲಿಂಗಿಗಳು ಗೌರವಯುತ ಜೀವನ ನಡೆಸಲು ಹಾಗೂ ಅತ್ಯುನ್ನತ ಸಾಧನೆ ಮಾಡಲು ಸಹಾಯಕವಾಗಿದೆ. ಉಡುಪಿ ಜಿಲ್ಲಾಡಳಿತದ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಡಿಯಲ್ಲಿ, ಜಿಲ್ಲೆಯಲ್ಲಿರುವ ಆಸಕ್ತ 19 ಮಂದಿ ಲಿಂಗತ್ವ ಅಲ್ಪ ಸಂಖ್ಯಾತರಿಗೆ ಕಾರ್ಕಳದ ಸ್ತ್ರೀ ಶಕ್ತಿ ಭವನದಲ್ಲಿ ರೂ. 10000 ಗಳ ಸ್ಟೈಪೆಂಡ್ ನೊಂದಿಗೆ 5–6–2023 ರಿಂದ 4–7–2023 ರ ವರೆಗೆ ಒಂದು ತಿಂಗಳ ಕಾಲ ಯಕ್ಷಗಾನ ಹೆಜ್ಜೆಗಾರಿಕೆ ಹಾಗೂ ಪ್ರದರ್ಶನದ ಕುರಿತು ತರಬೇತಿ ನೀಡಲಾಗಿದೆ.

ಈ ಕಲಾ ಶಿಬಿರದಲ್ಲಿ ನೃತ್ಯ, ಅಭಿನಯ, ಸಂಭಾಷಣೆಯಲ್ಲಿ ತರಬೇತಿ ಪಡೆದ ಲಿಂಗತ್ವ ಅಲ್ಪ ಸಂಖ್ಯಾತರು ತರಬೇತಿ ಅಂತ್ಯದಲ್ಲಿ, ಶ್ವೇತ ಕುಮಾರ ಚರಿತ್ರೆ ಎಂಬ ಪೌರಾಣಿಕ ಯಕ್ಷಗಾನ ಪ್ರಸಂಗವನ್ನು ಅದ್ಭುತವಾಗಿ ಪ್ರದರ್ಶಿಸಿ, ನೆರೆದಿದ್ದವರ ಮೆಚ್ಚುಗೆ ಗಳಿಸಿದರು. ಯಕ್ಷಗಾನ ತರಬೇತಿಯ ನಾಟ್ಯ ಗುರುಗಳಾಗಿ ಸುಧೀರ್ ಉಪ್ಪೂರು ಮತ್ತು ವಿಜಯಗಾಣಿಗ ಬೀಜಮಕ್ಕಿ, ಚಂಡೆ ಶಶಿಕುಮಾರ್, ಮದ್ದಳೆಯಲ್ಲಿ ನವೀನ್ ಕುಮಾರ್ ಮತ್ತು ಭಾಗವತಿಕೆಯಲ್ಲಿ ಸುದೀಪ್ ಚಂದ್ರ ಶೆಟ್ಟಿ ಸಹಕಾರ ನೀಡಿದ್ದಾರೆ.

ಯಕ್ಷಗಾನ ತರಬೇತಿ ಪಡೆದಿರುವ ಈ ಲಿಂಗತ್ವ ಅಲ್ಪ ಸಂಖ್ಯಾತರು ಯಕ್ಷಗಾನ ಪ್ರಸಂಗಗಳಲ್ಲಿ ಸ್ವತಂತ್ರವಾಗಿ ವೇಷಧಾರಿಗಳಾಗಿ ಅಭಿನಯಿಸುವ ಸಾಮರ್ಥ್ಯವನ್ನು ಹೊಂದಿದ್ದು ಈ ಮೂಲಕ ಜೀವನ ನಿರ್ವಹಣೆಗಾಗಿ ಆರ್ಥಿಕವಾಗಿ ಸಂಪಾದನೆ ಮಾಡಲು ಹಾಗೂ ತಮ್ಮದೇ ತಂಡಗಳನ್ನು ರಚಿಸಿಕೊಂಡು ಸ್ವತಂತ್ರವಾಗಿ ಕಾರ್ಯಕ್ರಮಗಳನ್ನು ನೀಡಲು



ಸಮರ್ಥರಾಗಿದ್ದಾರೆ. ಹೊರ ಜಿಲ್ಲೆ, ರಾಜ್ಯ, ದೇಶ ವಿದೇಶಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಲು ಉತ್ಸುಕರಾಗಿರುವ ಇವರಿಗೆ ಸೂಕ್ತ ಪ್ರೋತ್ಸಾಹ, ಬೆಂಬಲ ಮತ್ತು ಅವಕಾಶಗಳನ್ನು ನೀಡುವ ಮಹತ್ತರ ಜವಾಬ್ದಾರಿ ಇಡೀ ಸಮಾಜದ್ದಾಗಿದೆ.

---

# ಧೀರ ಕಲೆಯೊಳಗೆ ಕೀರವಾಣಿಯರು – 15



**ಸಾಯಿಸುಮಾ ಎಂ ನಾವುಡ**

## ಬಡಗುತಿಟ್ಟಿನ ಅದ್ಭುತ ಮಹಿಳಾ ಖಳಪಾತ್ರಧಾರಿ; ಶ್ರೀಮತಿ ಮಯೂರಿ ಉಪಾಧ್ಯಾಯ


**ಯ**ಕ್ಷಗಾನ ಕಲೆ ಎಲ್ಲರಿಗೂ ಎಳವೆಯಲ್ಲಿಯೇ ಒದಗಿ ಬರುವುದಿಲ್ಲ. ಅರ್ಥಾತ್ ಅದನ್ನು ಕಲಿಯುವುದಕ್ಕೆ ತಕ್ಕ ವಾತಾವರಣವೋ ಅವಕಾಶವೋ ಇದ್ದಿರುವುದಿಲ್ಲ. ಆದರೆ ಆಸಕ್ತಿ ಎಳವೆಯಲ್ಲೇ ಮೊಳಕೆಯೊಡೆಯುವುದಕ್ಕೆ ಆರಂಭವಾಗಿರುತ್ತದೆ. ಅವಕಾಶ ದೊರೆತಾಗ ಅದು ಪಕ್ವ ಫಲವಾಗುತ್ತದೆ. ಹೀಗೆ ತನ್ನ ಮಕ್ಕಳಿಗೆ ಯಕ್ಷಗಾನವನ್ನು ಕಲಿಸುವುದಕ್ಕಾಗಿ ಕರಕೊಂಡು ಹೋದವರು, ಅಲ್ಲಿ ತಾನೂ ಕಲಿತು ವೇಷಕಟ್ಟಿದವರು ಶ್ರೀಮತಿ ಮಯೂರಿ ಉಪಾಧ್ಯಾಯ ಅವರು.

**ಭಾ**ಗವತರಾಗಿದ್ದ ಅಜ್ಜ ನಾರಾಯಣ ಭಟ್ ಕೆರೆ, ಮದ್ದಳೆವಾದಕರಾಗಿದ್ದ ಚಿಕ್ಕಪ್ಪ ಮತ್ತು ಅಪ್ಪ ಹೀಗೆ ಯಕ್ಷಗಾನೀಯ ಎನಿಸುವ ವಾತಾವರಣ ಇದ್ದರೂ ಹೆಮ್ಮಕ್ಕಳಿಗೆ ಆ ಕಾಲದಲ್ಲಿ ಯಕ್ಷಗಾನ ಕಲಿಸುವವರಿಲ್ಲದೇ ಹೋಯಿತು ಎಂಬ ಭಾವ ಮಯೂರಿ ಉಪಾಧ್ಯಾಯ ಅವರಲ್ಲಿತ್ತು. ಮಯೂರಿಯವರು ಅದೆಷ್ಟೋ ಯಕ್ಷಗಾನಗಳನ್ನು ತನ್ನಜ್ಜಿಯ ಜೊತೆಗೆ ಹೋಗಿ ವೀಕ್ಷಿಸುತ್ತಾ ಇದ್ದರೂ ಮನದಲ್ಲಿ ಸರಿಯಾಗಿ ಅಚ್ಚಾಗಿ, ಬೇರೂರಿ, ಮಾಡಿದರೆ ಇಂತಹ ವೇಷವೇ ಮಾಡಬೇಕು ಎಂದೆನಿಸಿದ ಪಾತ್ರವೆಂದರೆ ಚಿಟ್ಟಾಣಿಯವರ ಭಸ್ಮಾಸುರ. ಮದುವೆಯಾಗಿ ಬೆಂಗಳೂರಿಗೆ ಬರುತ್ತಾರೆ. ಸಂಸಾರ, ಮಕ್ಕಳ ವಿಚಾರದಲ್ಲೇ ಸಮಯ ಸಾಗುತ್ತದೆ. ಒಮ್ಮೆ ಕಲಾದರ್ಶಿನಿ ತಂಡದ ಮಕ್ಕಳ ಯಕ್ಷಗಾನವನ್ನು ನೋಡಿದಾಗ, ತನಗಂತೂ ಯಕ್ಷಗಾನವನ್ನು ಕಲಿಯುವುದಕ್ಕಾಗಲಿಲ್ಲ, ಮಕ್ಕಳಿಗಾದರೂ ಕಲಿಸೋಣ ಎಂದುಕೊಂಡು ಕಲಾದರ್ಶಿನಿಗೆ ಹೋದಾಗ ಅಲ್ಲಿ ಮಹಿಳಾ ತಂಡವೂ ಇದ್ದದ್ದನ್ನು ಗಮನಿಸುತ್ತಾರೆ. ಯಕ್ಷಗಾನವನ್ನು ಕಲಿಯಬೇಕೆಂಬ ಉತ್ಕಟ ಬಯಕೆ ಮತ್ತೆ ತಲೆಯೆತ್ತುತ್ತದೆ. ಆಗ ಮಯೂರಿಯವರಿಗೆ 38 ವರ್ಷ ಪ್ರಾಯ.

**ಹೀ**ಗೆ ತನ್ನ 38 ನೇ ವಯಸ್ಸಿನಲ್ಲಿ ಯಕ್ಷಗಾನದ ಹೆಜ್ಜೆಗಾರಿಕೆಯನ್ನು ಕಲಿತು, ಗೆಜ್ಜೆಕಟ್ಟಿದ ಮಯೂರಿಯವರು ಹುಟ್ಟಿದ್ದು 05–07–1965ರಲ್ಲಿ . ಇವರ ತಂದೆ–ತಾಯಿ ಶ್ರೀ ರಘುರಾಮ ಭಟ್ ಕೆರೆ ಹಾಗೂ ಶ್ರೀಮತಿ ಲಲಿತಾ ಭಟ್ ಕೆರೆ. ಟಿ.ಸಿ.ಹೆಚ್ ಹಾಗೂ ಸಂಸ್ಕೃತ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಳ್ಳುತ್ತಾರೆ. ಕರ್ನಾಟಕ ಕಲಾದರ್ಶಿನಿ ಸಂಸ್ಥೆಯಲ್ಲಿ ಶ್ರೀ ಶ್ರೀಧರ ಗೋಪಾಡಿ ಮತ್ತು ಶ್ರೀ ಶಂಕರ ಬಾಳ್ಕುದ್ರು ಇವರಿಂದ ಯಕ್ಷಗಾನವನ್ನು ಮತ್ತು ಶ್ರುತಿಯಲ್ಲಿ ಮಾತನಾಡುವುದು ಹೇಗೆ ಎಂಬುದನ್ನು ಅಭ್ಯಸಿಸುತ್ತಾರೆ. ಆ ಬಳಿಕ ಯಕ್ಷಗಾನವನ್ನು ಕರಗತ ಮಾಡಿಕೊಳ್ಳುತ್ತಾ ಹೋಗುತ್ತಾರೆ. ಹದಿನೈದು ವರ್ಷಗಳ ಹಿಂದೆ ಸ್ವತಃ ಮಯೂರಿ ಉಪಾಧ್ಯಾಯ ಅವರು ಆರಂಭಿಸಿದ "ಯಕ್ಷಸಿರಿ ಬೆಂಗಳೂರು (ರಿ)" ಎಂಬ ಮಹಿಳಾ ತಂಡ ಇಂದಿಗೂ ಪ್ರದರ್ಶನಗಳನ್ನು ನೀಡುತ್ತಾ ಇದೆ.

ಸಿರಿಕಲಾ ಮೇಳ, ಯಕ್ಷಗೆಜ್ಜೆ ಶಿರಸಿ, ಸಪ್ತಸ್ವರ ಸೇವಾಸಂಸ್ಥೆ ದಾಂಡೇಲಿ, ಲಹರಿ ಕಲಾರಂಗ ಮೂಡುಗಿಳಿಯಾರು, ಸಾಯಿಕಲಾ ಪ್ರತಿಷ್ಠಾನ ಶಿವಮೊಗ್ಗ, ಶ್ರೀಮಾತಾ ಮಹಿಳಾ ಯಕ್ಷಕಲಾ ಟ್ರಸ್ಟ್ ಶಿವಮೊಗ್ಗ, ಗಾಯತ್ರಿ ಯಕ್ಷಗಾನ ಮಂಡಳಿ ತೀರ್ಥಹಳ್ಳಿ, ಶ್ರೀ ಕಾಂಚಿಕಾಂಬಾ ಮಹಿಳಾ ಯಕ್ಷಗಾನ ಮಂಡಳಿ ಗುಡ್ಡೆಯಂಗಡಿ, ಗಾನ ಸೌರಭ ಯಕ್ಷಗಾನ ಶಾಲೆ ಮುಂತಾದ ಅನೇಕ ಯಕ್ಷಗಾನ ತಂಡಗಲಲ್ಲಿ ಅತಿಥಿ ಕಲಾವಿದೆಯಾಗಿ ಭಾಗವಹಿಸಿದ ಅನುಭವ ಇವರದು. ಭಸ್ಮಾಸುರ ಮೋಹಿನಿ, ದಕ್ಷಯಜ್ಞ, ರಾವಣವಧೆ, ಸುಭದ್ರಾ ಕಲ್ಯಾಣ, ಕೃಷ್ಣಾರ್ಜುನ, ಮಾಗದ ವಧೆ, ಕೀಚಕ ವಧೆ, ನರಕಾಸುರ ವಧೆ, ರತ್ನಾವತೀ ಕಲ್ಯಾಣ, ಭೀಷ್ಮ ವಿಜಯ ಮುಂತಾದ ಅನೇಕ ಪೌರಾಣಿಕ ಪ್ರಸಂಗಗಳನ್ನು ಇವರ ತಂಡ ಪ್ರದರ್ಶಿಸಿ ಜನಮೆಚ್ಚುಗೆ ಪಡೆದಿದೆ. ಭಸ್ಮಾಸುರ, ಮಾಗಧ, ಕೀಚಕ, ಜಾಂಬವ, ಕಂಸ, ಭದ್ರಸೇನ, ಸಾಲ್ವ ಮುಂತಾದ ಪ್ರತಿನಾಯಕನ ಪಾತ್ರಗಳನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿ ಪಾತ್ರಕ್ಕೆ ನ್ಯಾಯ ಒದಗಿಸುವುದಲ್ಲದೇ, ಯಕ್ಷಗಾನಕ್ಕೊಪ್ಪುವಂತಹ ಗಟ್ಟಿಯಾದ ಸ್ವರಭಾರದೊಂದಿಗೆ ತಾವು ಮಾಡುವ ಪಾತ್ರಕ್ಕೆ ಇನ್ನಷ್ಟು ಜೀವತುಂಬಿ ಕಲಾಪ್ರೇಮಿಗಳನ್ನು ಸಂತೋಷಪಡಿಸಿದವರು ಶ್ರೀಮತಿ ಮಯೂರಿ ಉಪಾಧ್ಯಾಯ ಇವರು,





ತೆಂಕುತಿಟ್ಟು ಯಕ್ಷಗಾನವನ್ನು ಕೂಡ ಅಭ್ಯಾಸ ಮಾಡಿದ ಮಯೂರಿಯವರು ದಕ್ಷಯಜ್ಞ, ಶನೀಶ್ವರ ಮಹಾತ್ಮೆ ಮುಂತಾದ ಪ್ರಸಂಗಗಳಲ್ಲಿ ಪಾತ್ರ ನಿರ್ವಹಿಸಿದ್ದಾರೆ. **ಮ**ಯೂರಿ ಉಪಾಧ್ಯಾಯ ಇವರ ಯಕ್ಷಸಾಧನೆಯನ್ನು ಗುರುತಿಸಿ ಕಡತೋಕಾ ಮಂಜುನಾಥ ಭಾಗವತರ ಯಕ್ಷರಂಗೋತ್ಸವ ಕಾರ್ಯಕ್ರಮ, ಡಾ.ಕೆರೆಮನೆ ಮಹಾಬಲ ಹೆಗಡೆ ಸ್ಮಾರಕ ರಂಗ ಪ್ರತಿಷ್ಠಾನ, ಸಪ್ತಸ್ವರ ಸೇವಾಸಂಸ್ಥೆ ಗುಂದ, ಯಕ್ಷಗೆಜ್ಜೆ ಶಿರಸಿ, ದೆಹಲಿ ಕರ್ನಾಟಕ ಸಂಘ, ಗೋವಾ ಕನ್ನಡ ಸಮಾಜ, ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನ ಮುಂತಾದ ಸಂಮಾನಗಳು, ಚಿಗುರು ಕಲ್ಚರಲ್ ಟ್ರಸ್ಟ್ ಇವರಿಂದ ಮಹಿಳಾ ಸಾಧಕಿ ಪ್ರಶಸ್ತಿ, ಲಯಾಭಿನಯ ಕಲ್ಚರಲ್ ಫೌಂಡೇಶನ್ ವತಿಯಿಂದ ಉಭಯ ಯಕ್ಷ ಚತುರೆ ಪ್ರಶಸ್ತಿ, ಕರುನಾಡ ವಿಜಯಸೇನೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಂದರ್ಭದಲ್ಲಿ ಬೆಳವಾಡಿ ಮಲ್ಲಮ್ಮ ಪ್ರಶಸ್ತಿ, ರಾಷ್ಟ್ರೀಯ ಬಸವ ಪ್ರತಿಷ್ಠಾನದ ವತಿಯಿಂದ ಕಾಯಕರತ್ನ ಪ್ರಶಸ್ತಿ, ಕರ್ನಾಟಕ ಸಂಘ ಕೊಯಮುತ್ತೂರು ವತಿಯಿಂದ ನಾಟ್ಯಮಯೂರಿ ಪ್ರಶಸ್ತಿಗಳು ಇವರಿಗೊಲಿದಿವೆ. ಯಕ್ಷಗಾನದ ಜೊತೆಗೆ ಚಿತ್ರಕಲೆ, ಕಸೂತಿ, ಹೂತೋಟದ ಆಸಕ್ತಿಗಳು ಇವರದ್ದಾಗಿವೆ. ಪ್ರಜ್ಞಾವಂತ ಪ್ರೇಕ್ಷಕರಿಂದ ಕಲೆಯ ಉಳಿವು ಸಾಧ್ಯ ಎನ್ನು ಮಯೂರಿಯವರಿಗೆ ಬೆನ್ನೆಲುಬಾದದ್ದು ಪತಿ ಶ್ರಿ ಗಜಾನನ ಉಪಾಧ್ಯಾಯ, ಮಕ್ಕಳಾದ ಆದಿತ್ಯ, ಶಶಾಂಕ ಹಾಗೂ ಸೊಸೆ ರಾಧಿಕಾರ ಪ್ರೋತ್ಸಾಹ ಹಾಗೂ ಸಹಕಾರ. ಶ್ರೀಮತಿ ಮಯೂರಿ ಉಪಾಧ್ಯಾಯ ಅವರ ಕಲಾಜೀವನ ಇನ್ನಷ್ಟು ಸೊಗಸಾಗಲಿ ಎಂಬ ಆಶಯ ನಮ್ಮದು.

---

## ಕಡಂದಲೆ ರಾಮರಾಯರ ಪ್ರಸಂಗ ಕೃತಿಗಳು




**ಕ**ಡಂದಲೆ ರಾಮರಾಯರು (1860–1942) ಒಬ್ಬ ಹಿರಿಯ ಯಕ್ಷಗಾನ ಕವಿ. ಕಡಂದಲೆಯ ಭಕ್ತರಗುತ್ತು ಎಂಬ ಸ್ಥಳದವರು. ತಂದೆ ಸುಬ್ರಾಯರು ಐದು ಯಕ್ಷಗಾನ ಪ್ರಸಂಗ ರಚಿಸಿದ್ದಲ್ಲದೆ ಉಡುಪಿಯ ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯದಲ್ಲಿ ಹಲವು ಪ್ರಸಂಗಗಳನ್ನು ಪರಿಶೋಧಿಸಿ ಪಾವಂಜೆ ಗುರುರಾಯರಿಗೆ ಪ್ರಕಟಣೆಗೆ ಒದಗಿಸಿ ಹಲವು ಅಮೂಲ್ಯ ಯಕ್ಷಗಾನ ಪ್ರಸಂಗ ಕೃತಿಗಳು ಪ್ರಕಟವಾಗುವುದಕ್ಕೆ ಕಾರಣರಾದ ಯಕ್ಷಗಾನ ವಿದ್ವಾಂಸರು. ಶಾಲಾ ಶಿಕ್ಷಕರಾಗಿ ಕೂಡ ಕೆಲಸ ಮಾಡಿದ ಇವರು ಕೊನೆಯ ದಿನಗಳಲ್ಲಿ ಪಣಂಬೂರಿನಲ್ಲಿ ನೆಲೆಸಿದ್ದರು ಎಂದು ತಿಳಿದುಬರುತ್ತದೆ. ಕಡಂದಲೆಯವರ ಪ್ರಸಂಗದ ಕವಿತೆಗಳು ರಸವತ್ತಾಗಿದ್ದು ಅದರ ಭಾಷೆ, ಶೈಲಿ ಬಂಧಗಳ ಚೆಲುವು, ಕನ್ನಡ ಸಂಸ್ಕೃತಗಳ ಸಮಪಾಕ, ಅಲ್ಲಲ್ಲಿ ಮಿಂಚುವ ದೇಶಿತನ, ಛಂದೋಬದ್ಧತೆ ಮೊದಲಾದ ವಿಶಿಷ್ಟತೆಗಳಿಂದ ಯಕ್ಷಗಾನ ಸಾಹಿತ್ಯ ಆಸಕರನ್ನು ಆಕರ್ಷಿಸುತ್ತವೆ. ಗಯೋಪಾಖ್ಯಾನ, ದ್ರೌಪದೀಪ್ರತಾಪ, ಶ್ರೀರಾಮ ಪಾದುಕಾ ಪಟ್ಟಾಭಿಷೇಕ, ರಾಮರಾಜ್ಯ ವಿಯೋಗ, ರಾಮಾಂಜನೇಯ ಕಾಳಗ ಇವರ ಯಕ್ಷಗಾನ ಪ್ರಸಂಗ ಕೃತಿಗಳು. ಕಾರ್ತವೀರ್ಯಾರ್ಜುನ ಕಾಳಗ, ನೀಲಧ್ವಜ ಕಾಳಗ, ಶೂರ್ಪನಖಿ ವಿವಾಹ ಶ್ರೀ ಕೃಷ್ಣ ಬಾಲಲೀಲೆ ರೇಣುಕಾದೇವಿ ಮಹಾತ್ಮೆ ಇತ್ಯಾದಿ ಹಲವು ಪೂರ್ವ ಕವಿಗಳ ಯಕ್ಷಗಾನ ಪ್ರಸಂಗಗಳ ಹಸ್ತಪ್ರತಿಗಳನ್ನು ಪರಿಶೋಧಿಸಿ,



ಲೋಪಗಳನ್ನು ಸರಿಪಡಿಸಿ, ಕೆಲವೆಡೆ ಪದ್ಯಗಳನ್ನು ರಚಿಸಿ ಸೇರಿಸಿ ಪ್ರಕಟಣೆಗೆ ಸಿದ್ಧಗೊಳಿಸಿದ್ದಾರೆ. **ದ್ರೌ**ಪದೀ ಪ್ರತಾಪ ಕಡಂದಲೆ ರಾಮರಾಯರ ಜನಪ್ರೀಯ ಪ್ರಸಂಗ. ಶ್ರೀ ಮನ್ಮಧ್ವ ಸಿದ್ಧಾಂತ ಗ್ರಂಥಾಲಯ ಉಡುಪಿ ಇವರು ನಾನೂರೈವತ್ತು ಪದ್ಯಗಳಿಂದ ರಚಿತವಾದ ಈ ಪ್ರಸಂಗಕೃತಿಯನ್ನು ಹನ್ನೆರಡು ಬಾರಿ ಒಟ್ಟಿಗೆ ಸುಮಾರು 25 ಸಾವಿರ ಪ್ರತಿಗಳನ್ನು ಮುದ್ರಿಸಿದ್ದಾರೆ ಎನ್ನುವ ದಾಖಲೆ ಇದರ ಜನಪ್ರೀಯತೆಯನ್ನು ಸಾಬೀತುಪಡಿಸುತ್ತದೆ. 1948 ರಲ್ಲಿ ಆರನೆಯ ಆವೃತ್ತಿ 1959ರಲ್ಲಿ ಒಂಬತ್ತನೆಯ ಆವೃತ್ತಿ ಮತ್ತು 1972ರಲ್ಲಿ ಹನ್ನೆರಡನೆಯ ಆವೃತ್ತಿ ಪ್ರಕಟವಾಗಿದೆ. ಇದಲ್ಲದೆ 2012ರಲ್ಲಿ ನವಭಾರತೀ ಪ್ರಕಾಶನ ಮೈಸೂರು ಇವರು ಪ್ರಕಟಿಸಿದ ಏಳು ಯಕ್ಷಗಾನ ಪ್ರಸಂಗಗಳು ಎನ್ನುವ ಸಂಪುಟದಲ್ಲಿ ದ್ರೌಪದೀಪ್ರತಾಪ ಪ್ರಕಟವಾಗಿದೆ. ಗಯಾಸುರ ಕಾಳಗ 1925 ರಲ್ಲಿ ರಾಮರಾಜ್ಯ ವಿಯೋಗ 1929ರಲ್ಲಿ ಶ್ರೀ ರಾಮಪಾದುಕಾ ಪಟ್ಟಾಭಿಷೇಕ 1955ರಲ್ಲಿ ರಾಮಾಂಜನೇಯ ಕಾಳಗ 1962ರಲ್ಲಿ ಪ್ರಕಟವಾದ ದಾಖಲೆ ಸಿಗುತ್ತದೆ. ಕಡಂದಲೆ ರಾಮರಾಯ ಪರಿಷ್ಕೃತ ನೀಲಧ್ವಜಕಾಳಗ 1932ರಲ್ಲಿ ಶ್ರೀಕೃಷ್ಣ ಬಾಲಲೀಲೆ 1930ರಲ್ಲಿ ಕಾರ್ತವೀರ್ಯಾರ್ಜುನ ಕಾಳಗ 1964ರಲ್ಲಿ ಪ್ರಕಟವಾಗಿವೆ. ಹೀಗೆ ಯಕ್ಷಗಾನ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಕಡಂದಲೆ ರಾಮರಾಯರು ಯಕ್ಷಗಾನ ಕವಿ ಪರಂಪರೆಯಲ್ಲಿ ಒಬ್ಬ ಶ್ರೇಷ್ಠ ಕವಿಯಾಗಿ ಗುರುತಿಸಲ್ಪಟ್ಟಿದ್ದಾರೆ.

***ಲೇಖಕರು: ಉಮೇಶ ಶಿರೂರು, ಬೆಂಗಳೂರು 9448353910***

# ಯಕ್ಷಗಾನ ಪ್ರಸಂಗದ ಕುರಿತು ವಿದ್ವಂಸರ ವ್ಯಾಖ್ಯಾನ ಹಾಗೂ ಲಕ್ಷಣಗಳ ವಿವೇಚನೆ

**ಯ**ಕ್ಷಗಾನ ಪ್ರಸಂಗಗಳು ಪದ್ಯ ರೂಪದಲ್ಲಿರುವ ಕಥಾ ವಸ್ತುಗಳಾಗಿವೆ. ಯಕ್ಷಗಾನ ಅರ್ಥಗಾರಿಕೆಗೆ ಪ್ರಸಂಗಗಳು ಮೂಲ ಪಠ್ಯಗಳಾಗಿರುತ್ತವೆ. ಪ್ರಸಂಗವು ಪ್ರದರ್ಶನದ ಸಂವಿಧಾನವಾಗಿರುತ್ತದೆ. ಭಾಗವತರು ಮತ್ತು ಕಲಾವಿದರು ಪ್ರಸಂಗನಿಷ್ಠರಾಗಿ ಕಥಾವಸ್ತುವನ್ನು ಮುಂದಕ್ಕೆ ಒಯ್ಯುತ್ತಾರೆ. ಯಕ್ಷಗಾನ ಪ್ರಸಂಗ ಕರ್ತನನ್ನು **ಯಕ್ಷಕವಿ** ಎಂದು ಕರೆಯುತ್ತಾರೆ. ಪ್ರೊ. ಮರಿಯಪ್ಪ ಭಟ್ಟರು ಯಕ್ಷಗಾನ ಪ್ರಸಂಗಗಳನ್ನು ಜಾನಪದ ವಾಙ್ಮಯ ಎಂದು ಪರಿಗಣಿಸಿದ್ದಾರೆ. 'ಪ್ರಸಂಗ' ಎಂದರೆ ಘಟನೆ ಎಂದರ್ಥ. ಒಂದು ಪ್ರಸಂಗವು ಒಂದು ಘಟನಾ ಕೇಂದ್ರಿತವಾಗಿರುತ್ತದೆ. ಉದಾ: ಶೂರ್ಪನಖಾ ಮಾನಭಂಗ, ದ್ರೌಪದಿ ವಸ್ತ್ರಾಪಹಾರ, ಕರ್ಣಾವಸಾನ, ಇತ್ಯಾದಿ. ಈ ಘಟನೆಗಳನ್ನು ಇತರ ವಿವರಗಳಿಂದ ವಿಸ್ತರಿಸಿ ಪ್ರಸಂಗವನ್ನು ರಚಿಸಲಾಗುತ್ತದೆ.

***ರಾಘವ ನಂಬಿಯಾರ***ರು ಹೀಗನ್ನುತ್ತಾರೆ: 'ಪ್ರಸಂಗ ಮೂಲತಃ ಒಂದು ಗೀತ ರೂಪಕ. ಆದರೆ, ಉದ್ದೇಶ ಸರಸ ಸಂಭಾಷಣೆಯಿಂದ ಕೂಡಿದ ಸೊಗಸಾದ ರಂಗಪ್ರದರ್ಶನವನ್ನು ಏರ್ಪಡಿಸುವುದು. ಕರ್ನಾಟಕದ ಕೆಲವು ಕಡೆಗಳಲ್ಲಿ ಲಿಖಿತವಾಗಿ ಕಾಣಿಸುವ ಕರಾವಳಿ ಹಾಗೂ ಮಲೆನಾಡಿನ ಭಾಗಗಳಲ್ಲಿ ಆಶು ವಚನಗಾರಿಕೆಯಲ್ಲಿ ಕಾಣಿಸುವ ಸಂಭಾಷಣೆಯಿಂದ ಯಕ್ಷಗಾನದ ರಂಗಕೃತಿ ಗದ್ಯಪದ್ಯ ಮಿಶ್ರಿತವಾದ ದೃಶ್ಯ ಕಾವ್ಯಕ್ಕೆ ಸೇರಬೇಕು.' [ಕಲ್ಲೂರ ಕೆ. ಎಸ್.ಸಂದಿ ಆಶುವೈಭವ, 1989, ಪುಟ 196]

***ಟಿ. ಕೇಶವಭಟ್ಟರ*** ಅಭಿಪ್ರಾಯ ಹೀಗಿದೆ: 'ಯಕ್ಷಗಾನ ಕಲೆ ಪ್ರಾಯೋಗಿಕವಾಗಿ ತಾಳಮದ್ದಳೆ, ಆಟಗಳ ರೂಪದಲ್ಲಿ ರಾತ್ರಿ ಜಾಗರಣೆಯ ಸುಮಾರು ಎಂಟು ಗಂಟೆ ಅವಧಿಯ ಕಾರ್ಯಕ್ರಮದ ವಿವಿಧ ರಸಾತ್ಮಕ ಕಥಾವಸ್ತುವನ್ನು ಒಳಗೊಂಡಿರುತ್ತದೆ. ಇಂತಹ ಒಂದೊಂದು ಪರಿಪೂರ್ಣ ಕಥಾತ್ಮಕ ಪದಗಳ ಕೃತಿಯನ್ನು ಪ್ರಸಂಗ ಎನ್ನುವರು. ಯಕ್ಷಗಾನ ಸಾಹಿತ್ಯವು ದಾಸಸಾಹಿತ್ಯಕ್ಕಿಂತ ಪ್ರಬುದ್ಧ ಹಾಗೂ ಪ್ರಾಚೀನ ಕಲೆಯಾಗಿ ಕಂಡು ಬರುತ್ತದೆ. ರಾಗ ತಾಳಬದ್ಧ ಕೀರ್ತನೆಗಳ ರೂಪದಲ್ಲಿ ಭಕ್ತಿ ಸಾಹಿತ್ಯವನ್ನು ನಿರ್ಮಿಸಿರುವ ಶಿವದಾಸರು, ಹರಿದಾಸರು, ಜಿನಭಕ್ತರು ಬಲುಮಟ್ಟಿಗೆ ಯಕ್ಷಗಾನ ಪದಗಳನ್ನೇ ಅನುಸರಿಸಿದಂತೆ ಕಂಡು ಬರುತ್ತದೆ. [ಆಶುವೈಭವ, ಪುಟ 132]

### ಯಕ್ಷಗಾನ ಪ್ರಸಂಗ ಲಕ್ಷಣಗಳು

ಘಟನೆಯೊಂದರ ಪದ್ಯರೂಪವೇ ಯಕ್ಷಗಾನ ಪ್ರಸಂಗ. ಪ್ರಸಂಗದ ಪದ್ಯಗಳು ಛಂದಸ್ಸು ಅಥವಾ ಮಟ್ಟು ಆಧರಿಸಿ ರೂಪುಗೊಂಡಿವೆ. ಯಕ್ಷಗಾನ ಪ್ರಸಂಗಗಳ ಪದ್ಯಗಳು ತಾಳಲಯ ಬದ್ಧವಾಗಿವೆ. ರಸಾಭಿವ್ಯಕ್ತಿಗೆ ಅನುಕೂಲವಾಗುವಂತೆ ಪ್ರಸಂಗದ ಓಟವಿರುತ್ತದೆ. ಯಕ್ಷಗಾನ ಪ್ರಸಂಗಕ್ಕೆ ಕಾಲಬದ್ಧತೆಯಿದೆ. ಅದು ಮಹಾಕಾವ್ಯವಲ್ಲ. ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ಐದು ಶತಮಾನಗಳ ಇತಿಹಾಸವಿದೆ. ಯಕ್ಷಗಾನ ಪ್ರಸಂಗಗಳಲ್ಲಿ ಪಾಂಡಿತ್ಯ ಪ್ರದರ್ಶನಕ್ಕೆ ವಿಪುಲಾವಕಾಶವಿಲ್ಲ. ಯಕ್ಷಗಾನ ಪ್ರಸಂಗಗಳಲ್ಲಿ ವಿತಾಲದ ತಾಳವಿಲ್ಲದ ಪದ್ಯಗಳು ತೀರಾ ಕಡಿಮೆ. ಪುರಾಣ, ಮಹಾಕಾವ್ಯ, ಜಾನಪದ, ಐತಿಹಾಸಿಕ ಮತ್ತು ಕಾಲ್ಪನಿಕ ಘಟನೆಗಳನ್ನು ಆಧರಿಸಿ ಪ್ರಸಂಗಗಳನ್ನು ರಚಿಸಲಾಗಿದೆ. ಯಕ್ಷಗಾನದ ಸಾಹಿತ್ಯವು ಕೆಲವು ವಿಶಿಷ್ಟ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಅವನ್ನು ಯಕ್ಷಗಾನ ಸಾಹಿತ್ಯದ ಉದ್ದೇಶಗಳೆಂದು ಕರೆಯಬಹುದು.

### ಯಕ್ಷಗಾನ ಸಾಹಿತ್ಯದ ಉದ್ದೇಶಗಳು ಇವು:

***1. ಮೌಲ್ಯಗಳ ಪ್ರತಿಪಾದನೆ:*** ಯಕ್ಷಗಾನದ ಪ್ರಸಂಗಗಳು ಪೌರಾಣಿಕ ಮೌಲ್ಯ ಗಳನ್ನು ಪ್ರತಿಪಾದಿಸುತ್ತವೆ. ಸತ್ಯ ಅಥವಾ ಧರ್ಮಕ್ಕೆ ಅಂತಿಮ ಜಯ ಎಂಬುದೇ ಈ ಮೌಲ್ಯ. ಭಕ್ತಿ ಮತ್ತು ಪಾತಿವ್ರತ್ಯ ಇವು ಯಕ್ಷಗಾನ ಪ್ರಸಂಗಗಳು ಪ್ರತಿಪಾದಿಸುವ ಮೌಲ್ಯಗಳು. ಕೆಲವು ಪ್ರಸಂಗಗಳು ಪುನರ್ಜನ್ಮ, ಕರ್ಮಸಿದ್ಧಂತ ಕುಲಶ್ರೇಷ್ಠತೆ, ವರ್ಣಭೇದದ ಸಮರ್ಥನೆ, ಜಾತಿ ಪದ್ಧತಿಯ ಸಮರ್ಥನೆ ಮಾಡುವುದುಂಟು. ಈ ದೋಷಗಳಿಗೆ ಕವಿಗಳು ಮತ್ತು ಕಲಾವಿದರು ಕಾರಣರೇ ಹೊರತು ಅದು ಯಕ್ಷಗಾನದ ದೋಷವಲ್ಲ.

***2. ಸಂಘರ್ಷ ಚಿತ್ರಣ:*** ಯಕ್ಷಗಾನ ಪ್ರಸಂಗಗಳು ಒಳ್ಳೆಯ ಮತ್ತು ಕೆಟ್ಟ ಮೌಲ್ಯ ಗಳ ಸಂಘರ್ಷವನ್ನು ಚಿತ್ರಿಸುತ್ತವೆ. ಅಂತಿಮವಾಗಿ ಕೆಟ್ಟ ಮೌಲ್ಯಗಳು ಒಳ್ಳೆಯ ಮೌಲ್ಯಗಳಿಂದ ಸೋಲು ಅನುಭವಿಸುತ್ತವೆ. ಒಳ್ಳೆಯ ಮೌಲ್ಯಗಳನ್ನು ದೇವತೆಗಳು ಅಥವಾ ಋಷಿ ಮುನಿಗಳ ಮೂಲಕ ಸಂಕೇತಿಸಲಾಗುತ್ತದೆ. ಕೆಟ್ಟ ಮೌಲ್ಯಗಳನ್ನು ರಕ್ಕಸ ಅಥವಾ ರಾಕ್ಷಸಗುಣದ ಪಾತ್ರಗಳಿಂದ ಸಂಕೇತಿಸಲಾಗುತ್ತದೆ. ಯಕ್ಷಗಾನದ ಬಹುತೇಕ ಪ್ರಸಂಗಗಳು ಸುಖಾಂತವಾಗಿರುತ್ತವೆ. ಆದರೆ ಅಭಿಮನ್ಯು ವಧೆ, ಕೋಟಿ ಚೆನ್ನಯ್ಯ, ತುಳುನಾಡ ಸಿರಿ ಇವೇ ಮುಂತಾದ ದುಃಖಾಂತ ಪ್ರಸಂಗಗಳೂ ಯಕ್ಷಗಾನದಲ್ಲಿವೆ.

***3. ವಿಚಾರ ಪ್ರಚೋದಕ ಮನರಂಜನೆ:*** ಯಕ್ಷಗಾನವು ಜನರ ಮನರಂಜನೆಗಾಗಿಯೇ ಬೆಳವಣಿಗೆ ಹೊಂದಿದ ಒಂದು ಸಾಮುದಾಯಿಕ ಕಲೆ. ದೇವಾಲಯದ ಮಂತ್ರ ತಂತ್ರ ಅರಿವಾಗದ ಮತ್ತು ಬಹುಶಃ ದೇವಾಲಯಗಳಿಗೆ ಒಂದು ಕಾಲದಲ್ಲಿ ಪ್ರವೇಶ ನಿರಾಕರಿಸಲ್ಪಟ್ಟಿದ್ದ ಮಂದಿ ಅದನ್ನು ಬೆಳೆಸಿದರು. ಅದರ ಕಥಾ ವಸ್ತುವಿಗೆ ವಿಚಾರದೊಡನೆ ಮನರಂಜನೆ ನೀಡುವ ಉದ್ದೇಶವಿದೆ. ಅದನ್ನು ಮನರಂಜನೆಯ ಮೂಲಕ ವಿಚಾರವನ್ನು ನೀಡುವ ಉದ್ದೇಶವೆಂದೂ ಹೇಳಬಹುದು. ಯಕ್ಷಗಾನದ ಪದ್ಯಗಳಲ್ಲಿ ವಿಚಾರವೇ ಅಧಿಕ. ಅದು ಅತಿಯಾಗ ದಂತೆ ನೋಡಿಕೊಳ್ಳಲು ಮನರಂಜನೆ. ಉದಾತ ಯಕ್ಷಗಾನದ ಬೇಟೆ, ಪ್ರಣಯ ಮತ್ತು ಹಾಸ್ಯ. ಆಧುನಿಕ ನಾಟಕಗಳು ಅಳವಡಿಸುವ ಬ್ರೆಕ್ಟನ ತಂತ್ರವನ್ನು ಯಕ್ಷಗಾನ ಐದುನೂರು ವರ್ಷಗಳ ಹಿಂದೆಯೇ ಹಾಸ್ಯ ಪಾತ್ರಗಳ ಮೂಲಕ ಅಳವಡಿಸಿಕೊಂಡಿದೆ.

***4. ಕಾವ್ಯ ಸೃಷ್ಟಿಗೆ ಪ್ರಚೋದನೆ:*** ಯಕ್ಷಗಾನ ಪ್ರಸಂಗಗಳನ್ನು ಪದೇ ಪದೇ ಓದುವವರಿಗೆ ಮತ್ತು ಪ್ರದರ್ಶನ ನೋಡುವವರಿಗೆ ಪ್ರಸಂಗಗಳ ಪದ್ಯಗಳು ಬಾಯಿಪಾಠ ಬಂದುಬಿಡುತ್ತವೆ. 1980ರ ದಶಕದ ವರೆಗೂ ಉಡುಪಿ, ದ.ಕ. ಕಾಸರಗೋಡು ಜಿಲ್ಲೆಗಳ ಬಹುತೇಕ ಜನರ ಬಾಯಲ್ಲಿ ಪ್ರಸಂಗ ಪದ್ಯಗಳು ನರ್ತಿಸುತ್ತಿದ್ದವು. ಯಕ್ಷಗಾನ ಹಾಡುಗಳ ಕ್ಯಾಸೆಟ್ಟನ್ನು ಎಲ್ಲಾ ಧರ್ಮೀಯರು ಮನೆಗಳಲ್ಲಿ ಟೇಪ್ ರೆಕಾರ್ಡರಿಗೆ ಹಾಕಿ ಕೇಳುತ್ತಿದ್ದರು. ಹೆಚ್ಚು ವಿದ್ಯೆಯಿಲ್ಲದ ಕಲಾಸಕ್ತರು ಯಕ್ಷಗಾನ ನೋಡಿ ಪ್ರಸಂಗ ರಚಿಸಿದ್ದಿದೆ. ಕರ್ನಾಟಕದ ಕರಾವಳಿಯ ಜನರು ನಿಜಕ್ಕೂ ಬುದ್ಧಿವಂತರಾಗಿದ್ದರೆ ಅದಕ್ಕೆ ಯಕ್ಷಗಾನದ ಕೊಡುಗೆ ಅಪಾರ. ಕಾವ್ಯ ಸೃಷ್ಟಿಯಾಗಲಿ ಎನ್ನುವುದು ಯಕ್ಷಗಾನ ಸಾಹಿತ್ಯದ ಉದ್ದೇಶವಲ್ಲದಿದ್ದರೂ ಸುಸಂಸ್ಕೃತ ಸಮಾಜ ಸೃಷ್ಟಿಯ ಉದ್ದೇಶ ಯಕ್ಷಗಾನಕ್ಕಿದೆ.

***ಲೇಖಕರು – ಪ್ರಭಾಕರ ಶಿಶಿಲ***